ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಏಪ್ರಿಲ್ 29, 2021

ಸಂಪುಟ : 47 ಸಂಚಿಕೆ : 359 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


# ಕರ್ಫ್ಯೂಗೆ ನಗರ ಮೌನ.. ಸಮಸ್ಯೆಗಳಲ್ಲಿ ಜನ...

ದಾವಣಗೆರೆ, ಏ.28- ಕೊರೊನಾ ಕರ್ಫ್ಯೂಗೆ ಬೆಳಿಗ್ಗೆ 10ರ ನಂತರ ನಗರ ಸಂಪೂರ್ಣ ಸ್ತಬ್ಧವಾಗಿತ್ತು. ಜನತೆ ಸ್ವ ಇಚ್ಛೆಯಿಂದಲೇ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ಸರ್ಕಾರದ ಆದೇಶಕ್ಕೆ ಸ್ಪಂದಿಸಿದರು.

ವಹಿವಾಟು ಇಲ್ಲದೆ ಸಂಪೂರ್ಣ ನಗರ ಮೌನವಾಗುತ್ತಿರುವ ಬೆನ್ನಲ್ಲೇ ಸಮಸ್ಯೆಗಳೂ ಅನಾವರಣಗೊಳ್ಳಲಾರಂಭಿಸಿವೆ.

ಬುಧವಾರ ಲಾರೀ ಮಾಲೀಕರು ಸಾಗಾಣಿಕೆ ಸಮಯದಲ್ಲಿ ಲಾರಿಗಳು ಪಂಕ್ಚರ್ ಆದರೆ ಗ್ಯಾರೇಜ್‌ಗಳು ಬೇಕು ಎಂದರೆ, ಎಪಿಎಂಸಿ ವರ್ತಕರು 10 ಗಂಟೆ ಒಳಗಾಗಿ ಟೆಂಡರ್ ಪ್ರಕ್ರಿಯೆಗಳನ್ನು ಮುಗಿಸಲು ಸಾಧ್ಯವಿಲ್ಲ ಎಂದರು.

ಹೀಗೆ ಹಲವು ಸಮಸ್ಯೆಗಳು ಕರ್ಫ್ಯೂ ಯಶಸ್ವಿಯ ಬೆನ್ನಲ್ಲೇ ಉದ್ಭವಿಸಲಾರಂಭಿಸಿವೆ.

ಬೆಳಿಗ್ಗೆ 6 ರಿಂದ 10ರವರೆಗೆ ಅಗತ್ಯ ವಸ್ತುಗಳ ಮಾರಾಟಕ್ಕೆ ಅನುಮತಿ ನೀಡಿದ್ದರಿಂದ ಹಾಲು-ತರಕಾರಿ, ದಿನಸಿ, ಹಣ್ಣುಗಳನ್ನು ಜನತೆ ಮುಗಿ ಬಿದ್ದು ಕೊಂಡುಕೊಂಡರು.

ನಗರದ ಕೆ.ಆರ್. ಮಾರುಕಟ್ಟೆ ಹಾಗೂ ತಹಶೀಲ್ದಾರ್ ಕಚೇರಿ ಬಳಿಯ ತರಕಾರಿ ಮಾರು ಕಟ್ಟೆಗಳಲ್ಲಿ ಬೆಳಿಗ್ಗೆ ಹೋಲ್‌ಸೇಲ್ ಮಾರಾಟಕ್ಕೆ ಮಾತ್ರ ಅವಕಾಶ ನೀಡಲಾಗಿತ್ತು. ತಳ್ಳು ಗಾಡಿಯವರು ಹೆಚ್ಚಾಗಿ ತರಕಾರಿ ಕೊಳ್ಳುತ್ತಿದ್ದುದು ಕಂಡು ಬಂತು. ಮಾರುಕಟ್ಟೆ (2ನೇ ಪುಟಕ್ಕೆ)



ದಾವಣಗೆರೆ ವಿದ್ಯಾರ್ಥಿಭವನದ ಬಳಿ ಬೆಳಿಗ್ಗೆ ಪೊಲೀಸರು ಹೋಟೆಲ್ ಬಾಗಿಲು ಮುಚ್ಚಿಸುತ್ತಿರುವುದು.

## ಬಾರದ ಲಸಿಕೆ, ಜನತೆ ತಳಮಳ

### ಲಸಿಕೆ ಇದ್ದಾಗ ಜನ ಬರಲಿಲ್ಲ, ಜನ ಬಂದಾಗ ಲಸಿಕೆ ಇಲ್ಲ

ಜಿಲ್ಲೆಯಲ್ಲಿ ಕೊರೊನಾ ಎರಡನೇ ಅಲೆ ಉಲ್ಬಣಿಸುತ್ತಿರುವಂತೆಯೇ ಲಸಿಕೆ ಬೇಡಿಕೆಯೂ ಹೆಚ್ಚಾಗುತ್ತಿದೆ. ಮೊದಲೆಲ್ಲಾ ಲಸಿಕೆಗೆ ಬನ್ನಿ ಎಂದು ಪ್ರಚಾರ ಮಾಡಬೇಕಿತ್ತು. ಈಗ ಜನ ತಾವಾಗಿಯೇ ಲಸಿಕಾ ಕೇಂದ್ರಗಳಿಗೆ ಧಾವಿಸುತ್ತಿದ್ದಾರೆ. ಆದರೆ, ಲಸಿಕೆಯೇ ಲಭ್ಯವಾಗುತ್ತಿಲ್ಲ !




ಮಂಗಳವಾರ ಮೋತಿ ವೀರಪ್ಪ ಕಾಲೇಜಿನ ಲಸಿಕಾ ಕೇಂದ್ರದಲ್ಲಿ ಸಾಕಷ್ಟು ಜನರಿಗೆ ಲಸಿಕೆ ಸಿಕ್ಕಿರಲಿಲ್ಲ. ಬುಧವಾರವಂತೂ ಲಸಿಕೆಯೇ ಬಂದಿರಲಿಲ್ಲ. ಮತ್ತೆ ಯಾವಾಗ ಲಸಿಕೆ ಬರಲಿದೆ ಎಂಬ ಬಗ್ಗೆ ಸ್ಪಷ್ಟನೆಯೂ ಸಿಕ್ಕಿಲ್ಲ. ಒಟ್ಟಾರೆ ಲಸಿಕೆ ಇದ್ದಾಗ ಜನರು ಬರಲಿಲ್ಲ, ಜನ ಬಂದಾಗ ಲಸಿಕೆ ಇಲ್ಲ ಎಂಬ ಪರಿಸ್ಥಿತಿ ಉಂಟಾಗಿದೆ.

ಕೊರೊನಾ ಎರಡನೇ ಅಲೆಯಿಂದಾಗಿ ಸೋಂಕಿತರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದಂತೆ ಮುನ್ನೆಚ್ಚರಿಕೆಯಾಗಿ ಲಸಿಕೆ ಪಡೆಯಲು ಜನತೆ ದುಂಬಾಲು ಬೀಳುತ್ತಿದ್ದಾರೆ. ಆದರೆ ಲಸಿಕೆ ಖಾಲಿಯಾಗಿರುವುದು ಜನರಲ್ಲಿ ಆತಂಕವನ್ನುಂಟು ಮಾಡಿದೆ.

ಕಳೆದ ವಾರದವರೆಗೂ ಲಸಿಕೆ ಎಂದರೆ ಮೂಗು ಮುರಿಯುತ್ತಿದ್ದ ಜನತೆ. ಇದೀಗ ಲಸಿಕೆ ಎಲ್ಲಿ ಸಿಗುತ್ತಿದೆ, ಯಾವಾಗ ಸಿಗುತ್ತದೆ ಎಂದು ಪರದಾಡಲಾರಂಭಿಸಿದ್ದಾರೆ.

ಮೇ 1 ರಿಂದ 18 ವರ್ಷ ಮೇಲ್ಪಟ್ಟವರಿಗಾಗಿ ಉಚಿತವಾಗಿ ಲಸಿಕೆ ನೀಡುವುದಾಗಿ ಈಗಾಗಲೇ ಸರ್ಕಾರ ಭರವಸೆ ನೀಡಿದೆ. ಆದರೆ ಈಗಾಗಲೇ 45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ಕೊರತೆ ಉಂಟಾಗಿದೆ. ಇನ್ನು 18 ವರ್ಷ ಮೇಲ್ಪಟ್ಟ ಎಲ್ಲರೂ ಲ ಸಿಕೆ ಪಡೆಯಲು ಮುಂದಾದರೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲಿದೆ.

**2ನೇ ಡೋಸ್‌ಗಾಗಿ ಪರದಾಟ:** ಈಗಾಗಲೇ ಲಸಿಕೆಯ ಮೊದಲ ಡೋಸ್ ಪಡೆದವರು ಇದೀಗ ಎರಡನೇ ಡೋಸ್‌ಗಾಗಿ ಪರದಾಡುವ ದುಃಸ್ಥಿತಿ ಜಿಲ್ಲೆಯಲ್ಲೂ ನಿರ್ಮಾಣವಾಗಿದೆ. (2ನೇ ಪುಟಕ್ಕೆ)

## ಬೆಳಿಗ್ಗೆ 10 ರೊಳಗೆ ಎಪಿಎಂಸಿ ಬಂದ್

ದಾವಣಗೆರೆ, ಏ. 28- ರಾಜ್ಯ ಸರ್ಕಾರದ ಆದೇಶ ಹಾಗೂ ಮಾರ್ಗಸೂಚಿಗಳನ್ವಯ ಏ.28 ರಿಂದ ಮೇ 12 ರವರೆಗೆ ಲಾಕ್‌ಡೌನ್ ಜಾರಿಯಲ್ಲಿರುವುದರಿಂದ ದಾವಣಗೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವಿವಿಧ ಮಾರುಕಟ್ಟೆ ಪ್ರಾಂಗಣಗಳಲ್ಲಿ ನಡೆಯುವ ಕೃಷಿ ಹುಟ್ಟುವಳಿ ವ್ಯಾಪಾರ ವಹಿವಾಟಿನ ಸಮಯವನ್ನು ಬೆಳಿಗ್ಗೆ 6 ರಿಂದ 10 ರವರೆಗೆ ನಿಗದಿಪಡಿಸಲಾಗಿದೆ.

ಈ ಸಮಯದಲ್ಲೇ ಎಲ್ಲಾ ವ್ಯಾಪಾರ ವಹಿವಾಟಿನ ಚಟುವಟಿಕೆಗಳನ್ನು ಸಂಪೂರ್ಣ ಮುಗಿಸಿ ಅಂಗಡಿಗಳನ್ನು ಬಂದ್ ಮಾಡಿ ಸಹಕರಿಸಬೇಕೆಂದು ಎಪಿಎಂಸಿ ಪ್ರಕಟಣೆ ತಿಳಿಸಿದೆ.


MANIS DATA LINK

BSNL

# 446/1, Lawyer Road, K.B.Extension, Davanagere.

ನಿಮ್ಮಲ್ಲಿರುವ ಹಳೇ ಲ್ಯಾಂಡ್ ಲೈನ್ ನಂಬರ್‌ಗೆ ಇಂಟರ್‌ನೆಟ್ (FTTH) ಸೌಲಭ್ಯ ಕಲ್ಪಿಸಲಾಗುವುದು

3300 GB
60 Mbps

Super Speed Inter Net
24 Hrs. Unlimited free Calling on (Local + STD) to Any Network, **FTTH Plan**

Starting Plan
Rs.599/-
*Instalation Free*

PH: 08192 295900


## ಜಿಲ್ಲೆಯಲ್ಲಿಂದು 3 ಸಾವು, 196 ದೃಢ

ದಾವಣಗೆರೆ, ಏ.28- ಜಿಲ್ಲೆಯಲ್ಲಿ ಕೊರೊನಾದಿಂದಾಗಿ ಇಂದು ಮೂವರು ಸಾವನ್ನಪ್ಪಿದ್ದು, 196 ಜನರಲ್ಲಿ ಕೋವಿಡ್ ಪಾಸಿಟಿವ್ ದೃಢಪಟ್ಟ ಬಗ್ಗೆ ವರದಿ ಯಾಗಿದೆ.

**ಐದು ದಿನದಲ್ಲೇ 7 ಸಾವು ಜನರಲ್ಲಿ ಹೆಚ್ಚಿದ ಆತಂಕ**

ಏ.24ರಿಂದ ಇಲ್ಲಿಯವರೆಗೆ ಕೇವಲ ಐದು ದಿನಗಳಲ್ಲಿ ಈವರೆಗೆ 7 ಸಾವುಗಳು ಸಂಭವಿಸಿವೆ.

ದಾವಣಗೆರೆ ತಾಲ್ಲೂಕಿನಲ್ಲಿ 129, ಹರಿಹರ 14, ಜಗಳೂರು 10, ಚನ್ನಗಿರಿ 20, ಹೊನ್ನಾಳಿ 11 ಹಾಗೂ ಹೊರ ಜಿಲ್ಲೆಯ 12 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. 156 ಜನರು ಸೋಂಕು ಮುಕ್ತರಾಗಿ (2ನೇ ಪುಟಕ್ಕೆ)

## ಗ್ಯಾರೇಜ್‌ಗೆ ನಿರ್ಬಂಧ ಸಾಗಾಣಿಕೆ ಪಂಕ್ಚರ್

ದಾವಣಗೆರೆ, ಏ. 28 - ರಾಜ್ಯ ಸರ್ಕಾರ ಕೊರೊನಾ ನಿರ್ಬಂಧದ ಮಾರ್ಗಸೂಚಿಯಲ್ಲಿ ಕೃಷಿ ಸೇವೆಗಳಿಗೆ ಅನುಮತಿ ನೀಡಿದೆಯಾದರೂ, ವಾಹನಗಳ ಗ್ಯಾರೇಜ್ ಹಾಗೂ ಪಂಕ್ಚರ್ ಅಂಗಡಿಗಳಿಗೆ ಬೆಳಿಗ್ಗೆ 6ರಿಂದ 10ರವರೆಗೆ ಮಿತಿ ಹೇರಲಾಗಿದೆ.

**ಲಾರಿ ಸಂಚಾರಕ್ಕೆ ಬರಲು ಚಾಲಕರ ಹಿಂದೇಟು**

ಇದು ವಾಹನಗಳ ಸಾಗಣೆಗೆ ತೊಡಕಾಗಿದೆ. ಈ ನಿರ್ಬಂಧದ ನಡುವೆ ವಾಹನ ಓಡಿಸಲು ಸಾಧ್ಯವಾಗದು ಎಂದು ಜಿಲ್ಲಾ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸೈಯದ್ ಸೈಫುಲ್ಲಾ ತಿಳಿಸಿದ್ದಾರೆ.

ನಾಳೆ ಗುರುವಾರ ಗೊಬ್ಬರದ ರೇಕ್ ನಗರಕ್ಕೆ ಬರುತ್ತಿದೆ ಎಂಬ ಮಾಹಿತಿ ಇದೆ. ಗೊಬ್ಬರವನ್ನು ಹಳ್ಳಿ ಹಳ್ಳಿಗಳಿಗೆ ತಲುಪಿಸಬೇಕಿದೆ. ಇಂತಹ ಸಂದರ್ಭದಲ್ಲಿ ವಾಹನ ಏನಾದರೂ ಕೆಟ್ಟರೆ ಇಲ್ಲವೇ ಪಂಚರ್ ಆದರೆ ತಕ್ಷಣವೇ ರಿಪೇರಿ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ರಸ್ತೆ ನಡುವೆಯೇ ಒಣಗುವ ಪರಿಸ್ಥಿತಿ ಬರುತ್ತಿದೆ. (2ನೇ ಪುಟಕ್ಕೆ)



## ಸಾರ್ವಜನಿಕರ ಗಮನಕ್ಕೆ

ಸರ್ಕಾರದ ಆದೇಶದಂತೆ ನಮ್ಮ ಅಂಗಡಿಯು ಬೆಳಗ್ಗೆ 6 ರಿಂದ 10ರವರೆಗೆ ತೆರೆದಿರುತ್ತದೆ. (ಹದಿನಾಲ್ಕು ದಿನಗಳ ಕಾಲ) ಹಾಗಾಗಿ ನಮ್ಮಲ್ಲಿ ಎಲ್ಲಾ ತರಹದ ಕಟ್ಟಡ ಸಾಮಗ್ರಿಗಳು, ಕೃಷಿ ಸಾಮಗ್ರಿಗಳಾದ ಹಾರೆ, ಗುದ್ದಲಿ, ಸಲಿಕೆ, ಬುಟ್ಟಿಗಳು ದೊರೆಯುತ್ತವೆ. ಅಲ್ಲದೆ ಸಿಮೆಂಟ್ ಅಲ್ಟ್ರಾಟೆಕ್, ಜೆ.ಎಸ್. ಡಬ್ಲ್ಯೂ, ಹಾಗೂ ಮಹಾ ಎ.ಸಿ.ಸಿ., ಜ್ಯೋತಿ ಗೋಲ್ಡ್ ಸಿಮೆಂಟ್‌ಗಳು ಹಾಗೂ ಏಷ್ಯನ್ ಪೆಂಟ್ಸ್ ಮತ್ತು ಕಟ್ಟಡಕ್ಕೆ ಸಂಬಂಧಿಸಿದ ಇತರೆ ಸಾಮಗ್ರಿಗಳು ದೊರೆಯುತ್ತವೆ. ಸಾರ್ವಜನಿಕರು ಇದರ ಉಪಯೋಗ ಪಡೆದುಕೊಳ್ಳಬೇಕೆಂದು ಕೋರಿಕೊಳ್ಳುತ್ತೇವೆ.

ಬಿ. ಸಾವಿತ್ರಿದೇವಿ
ಮ್ಯಾನೇಜಿಂಗ್ ಪಾರ್ಟ್‌ನರ್
ಆನಂದ್ ಹಾರ್ಡ್‌ವೇರ್ಸ್ ಅಂಡ್ ಪೇಂಟ್ಸ್
ಮಂಡಿಪೇಟೆ, ದಾವಣಗೆರೆ.

ಮೊ. : 94480 46564, 96323 40841, 97315 21370


## ಎನ್.ಎಂ. ಬಕ್ಕಪ್ಪ ನಿಧನ



ಬೆಂಗಳೂರು ಟಿ. ದಾಸರಹಳ್ಳಿ ವಾಸಿ, ದಾವಣಗೆರೆಯ **ಬಕ್ಕಪ್ಪ ಎಂ. ನೀಲಗುಂದ** ಇವರು ದಿನಾಂಕ 28.04.2021ರ ಬುಧವಾರ ರಾತ್ರಿ 7 ಗಂಟೆಗೆ ನಿಧನರಾದರು. ಮೃತರಿಗೆ 70 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ ಮೊಮ್ಮಗ, ಸಹೋದರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.04.2021ರ ಗುರುವಾರ ಬೆಳಿಗ್ಗೆ 11 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ
ನೀಲಗುಂದ ವಂಶಸ್ಥರು
ನರಗನಹಳ್ಳಿ ವಂಶಸ್ಥರು ಹಾಗೂ ಸಹೋದರರು
ಮೊ. : 76763 12371, 94834 98918

॥ ಶ್ರೀ ಶಿವ ನಾರದಮುನಿ ಪ್ರಸನ್ನ ॥

## ನಾಲ್ಕನೇ ಪುಣ್ಯಸ್ಮರಣೆ



### ದಿ॥ ಅಣಬೇರು ನಾಗರಾಜ್

ಸಂತಸ ನೀಡುವ ಬಂಧುವಾಗಿ,
ಆಸರೆ ನೀಡುವ ಸ್ನೇಹಿತರಾಗಿ,
ಎಲ್ಲರ ಮನದೊಳಗೆ
ಶಾಶ್ವತವಾಗಿ ನೆಲೆಸಿ, ಮರೆಯಾದ
ನೀವು ನಮ್ಮನ್ನಗಲಿ
ನಾಲ್ಕು ವರ್ಷಗಳು ಸಂದರೂ,
ನೀವು ತೋರಿದ ಮಾರ್ಗದರ್ಶನದಲ್ಲಿ
ಮುನ್ನಡೆಯುತ್ತಾ
ಸದಾ ನಿಮ್ಮ ಸ್ಮರಣೆಯಲ್ಲಿರುವ;

ತಂದೆ : ಶೇಖರಪ್ಪ ಅಣಬೇರು ಮತ್ತು ಮಕ್ಕಳು. ತಾಯಿ : ಬಸಮ್ಮ ಶೇಖರಪ್ಪ ಅಣಬೇರು.
ಪತ್ನಿ : ಪಾರ್ವತಿ ನಾಗರಾಜ್ ಅಣಬೇರು.
ಪುತ್ರ : ಅಭಿಷೇಕ್ ಅಣಬೇರು. ಪುತ್ರಿ : ಅನುಶ್ರೀ ಅಣಬೇರು.
ಮಾಳಿಗೇರ್ ವಂಶಸ್ಥರು, ಅಣಬೇರು.

## ಹತ್ತನೇ ವರ್ಷದ ಸವಿನೆನಪು



ಲಿಂಗೈಕ್ಯ ಹೆಚ್.ಎನ್. ಷಡಾಕ್ಷರಪ್ಪನವರು
ಸಂಸ್ಥಾಪಕ ಸಂಪಾದಕರು, ಜನತಾವಾಣಿ
ಲಿಂಗೈಕ್ಯ : 29.04.2011

ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳು ಸಂದವು.
ನೀವು ತೋರಿದ ಮಾರ್ಗದರ್ಶನ ನಮಗೆ ಸದಾ ದಾರಿ ದೀಪ...

ನಿಮ್ಮ ನೆನಪಿನಲ್ಲಿರುವ

- ಪತ್ನಿ : ಶ್ರೀಮತಿ ಜಯಶೀಲ ಹೆಚ್.ಎನ್. ಷಡಾಕ್ಷರಪ್ಪ

ಮಕ್ಕಳಾದ :

- ಶ್ರೀಮತಿ ಉಜ್ವಲ ಶ್ರೀ ಡಿ.ಜಿ. ಸುಭಾಷ್
- ಶ್ರೀಮತಿ ಡಾ॥ ಸೌಜನ್ಯ ಶ್ರೀ ಡಾ॥ ಮಹೇಂದ್ರಪ್ಪ, ಮೈಸೂರು.
- ಶ್ರೀಮತಿ ಡಾ॥ ಪೂರ್ಣಿಮಾ ಶ್ರೀ ಡಾ॥ ಪ್ರಕಾಶ್ ಸೂರಣಗಿ, ದುಬೈ.
- ಶ್ರೀ ಎಂ.ಎಸ್. ವಿಕಾಸ್, ಸಂಪಾದಕರು, ಜನತಾವಾಣಿ, ಶ್ರೀಮತಿ ನೀತಾ
- ಶ್ರೀಮತಿ ಸ್ಮರಣ ಶ್ರೀ ರವಿ ಸಜ್ಜನ, ಯುಎಸ್‌ಎ
- ಶ್ರೀ ಡಾ॥ ಎಂ.ಎಸ್.ವಿಶ್ವಾಸ್ ಶ್ರೀಮತಿ ರಶ್ಮಿ, ಯುಎಸ್‌ಎ

ಮೊಮ್ಮಕ್ಕಳಾದ : ಸಿದ್ಧಾರ್ಥ್, ಸಿಂಚನ್, ಸಹ್ಯಾದ್ರಿ, ರಜತಾದ್ರಿ, ಅಭಿಷೇಕ್, ಜಯಧರ, ಪ್ರೇರಣ, ರಿಯಾ, ರಿಚಾ, ಸಾನ್ವಿ, ಆರುಶ್ ಹಾಗೂ ಹೊನ್ನೇನಹಳ್ಳಿ ವಂಶಸ್ಥರು, ಮೆಳ್ಳೇಕಟ್ಟೆ ಹಾಗೂ ಬಂಧು-ಮಿತ್ರರು.
ಜನತಾವಾಣಿ ಬಳಗ.

# ಕೊರೊನಾ ನಿರ್ವಹಣಾ ಸಮಿತಿ ಕಾರ್ಯವನ್ನು ಅನುಷ್ಠಾನಗೊಳಿಸಲು ಅಧಿಕಾರಿಗಳಿಗೆ ಸೂಚನೆ



**ಶಾಸಕ ಎಂ.ಪಿ. ರೇಣುಕಾಚಾರ್ಯ**

ಹೊನ್ನಾಳಿ, ಏ.28- ತಾಲ್ಲೂಕಿನ ಕೆಲ ಹಿರಿಯ ಅಧಿಕಾರಿಗಳು ಹೊನ್ನಾಳಿಗೆ ಶೋಕಿಗಾಗಿ ಬರುತ್ತಿದ್ದು, ಕೋವಿಡ್ ನಿರ್ವಹಣಾ ಸಮಿತಿಯ ಕಾರ್ಯಗಳಿಗೆ ಕೈ ಜೋಡಿಸುವ ನಿಟ್ಟಿನಲ್ಲಿ ಸ್ಥಳದಲ್ಲಿಯೇ ಇದ್ದು, ಸಮಿತಿಯ ಜೊತೆಗೆ ಕಾರ್ಯ ನಿರ್ವಹಿಸುವಂತೆ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಅವರು ತಾಲ್ಲೂಕು ಕಛೇರಿ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ ಹೊನ್ನಾಳಿ-ನ್ಯಾಮತಿ ವಿಧಾನಸಭಾ ಕ್ಷೇತ್ರಗಳ ಕೋವಿಡ್ ನಿರ್ವಹಣಾ ಸಮಿತಿಯ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದರು.

ಲಾಕ್‌ಡೌನ್‌ನ ದಿನದಲ್ಲಿ ಬೆಂಗಳೂರಿನಿಂದ ತಾಲ್ಲೂಕಿನ ಹಳ್ಳಿಗಳಿಗೆ 28 ಜನರು ಬಂದಿದ್ದು, ಹೊನ್ನಾಳಿ ಪಟ್ಟಣದಲ್ಲಿ ಬೆಂಗಳೂರಿನಿಂದ ಬರುವವರನ್ನು ತಪಾಸಣೆಗೆ ಒಳಪಡಿಸಿ ಕೊರೊನಾ ನಿವಾರಣೆಗೆ ಅಧಿಕಾರಿಗಳು ಜಾಗೃತಿ ಮೂಡಿಸಬೇಕಿದೆ ಎಂದರು. ಕೊರೊನಾ ಹೆಚ್ಚಾಗುತ್ತಿದ್ದು ಅಧಿಕಾರಿಗಳು ಸಮರೋಪಾದಿಯಲ್ಲಿ ಕೆಲಸ ಮಾಡಬೇಕು. ಸರ್ಕಾರದ ಕೋವಿಡ್ ನಿಯಮಗಳನ್ನು ಎಲ್ಲರೂ ಕಟ್ಟುನಿಟ್ಟಾಗಿ ಪಾಲಿಸಬೇಕಿದ್ದು, ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು. ಎಲ್ಲಾ ಅಧಿಕಾರಿಗಳು 24x7 ಕಾರ್ಯನಿರ್ವಹಿಸಬೇಕು ಎಂದರು.

ತಾಲ್ಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಈಗಾಗಲೇ ಕೋವಿಡ್ ಸೋಂಕಿತರಿಗೆ 50 ಬೆಡ್‌ಗಳ ವ್ಯವಸ್ಥೆ ಮಾಡಲಾಗಿದೆ. ಮಾದನಬಾವಿಯ ಮೊರಾರ್ಜಿ ದೇಸಾಯಿ ವಸತಿಯುತ ಶಾಲೆಯಲ್ಲಿ 100 ಬೆಡ್‌ಗಳ ವ್ಯವಸ್ಥೆ ಮಾಡಲಾಗಿದ್ದು, ಕಿತ್ತೂರು ರಾಣಿಚೆನ್ನಮ್ಮ ವಸತಿ ಶಾಲೆಯನ್ನು ಕೋವಿಡ್ ರೋಗಿಗಳಿಗೋಸ್ಕರ ಕಾಯ್ದಿರಿಸಲಾಗಿದೆ ಎಂದು ವಿವರಿಸಿದರು.

ತಹಶೀಲ್ದಾರ್ ಬಸನಗೌಡ ಕೋಟೂರ ಮಾತನಾಡಿ ಇದುವರೆಗೂ ಅವಳಿ ತಾಲ್ಲೂಕುಗಳಲ್ಲಿ 29,519 ಕೋವಿಡ್ ಲಸಿಕೆಗಳನ್ನು ನೀಡಲಾಗಿದೆ. 22,150 ಕೋವಿಡ್ ಮೊದಲನೇ ಹಂತದ ಲಸಿಕೆಯನ್ನು ನೀಡಲಾಗಿದ್ದು, 7,000 ಎರಡನೇ ಹಂತದ ಲಸಿಕೆಯನ್ನು ನೀಡಿದ್ದು ಎಲ್ಲಾ ಇಲಾಖಾಧಿಕಾರಿಗಳು ಕೋವಿಡ್ ನಿರ್ವಹಣೆಯಲ್ಲಿ ನಿರ್ಲಕ್ಷ್ಯಿಸದೇ ತಮಗೆ ವಹಿಸಿದ ಕೆಲಸಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕೆಂದು ಸೂಚಿಸಿದರು.

ಕೋವಿಡ್ ನಿರ್ವಹಣಾ ಸಮಿತಿ ಸಭೆಯಲ್ಲಿ ನ್ಯಾಮತಿ ತಾಲ್ಲೂಕು ತಹಶೀಲ್ದಾರ್ ತನುಜಾ ಸವದತ್ತಿ, ತಾಲ್ಲೂಕು ಆರೋಗ್ಯ ವೈದ್ಯಾಧಿಕಾರಿ ಡಾ. ಕೆಂಚಪ್ಪ ಆರ್.ಬಂತಿ, ತಾಲ್ಲೂಕು ಆಸ್ಪತ್ರೆ ಆಡಳಿತಾಧಿಕಾರಿ ಡಾ. ಚಂದ್ರಪ್ಪ, ಇಓ ಗಂಗಾಧರಮೂರ್ತಿ, ಬಿಇಓ ಜಿ. ರಾಜೀವ್, ಬಿಸಿಎಂ ಇಲಾಖಾಧಿಕಾರಿ ಮೃತ್ಯುಂಜಯ ಸ್ವಾಮಿ, ಪುರಸಭಾ ಅಧ್ಯಕ್ಷ ಕೆ.ವಿ. ಶ್ರೀಧರ್, ಇಂಜಿನಿಯರ್ ದೇವರಾಜ್, ನ್ಯಾಮತಿ ಪಿಎಸ್‌ಐ ರಮೇಶ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಸಿ.ಟಿ. ಸುರೇಶ್, ಸಿಡಿಪಿಓ ಮಹಾಂತಸ್ವಾಮಿ, ಜಿ.ಪಂ. ಸದಸ್ಯ ಎಂ.ಆರ್. ಮಹೇಶ್ ಸೇರಿದಂತೆ ಅವಳಿ ತಾಲ್ಲೂಕುಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಜಗಳೂರು : ಹೊರ ರಾಜ್ಯದವರ ಮಾಹಿತಿ ನೀಡಲು ಮನವಿ

ಜಗಳೂರು, ಏ.28- ಪಟ್ಟಣದ ಸಾರ್ವಜನಿಕರು ಕೊರೊನಾ ವೈರಸ್ ತಡೆಗಟ್ಟುವ ಸಲುವಾಗಿ ಹೊರ ರಾಜ್ಯ ಮತ್ತು ಹೊರ ಜಿಲ್ಲೆಗಳಿಂದ ಬಂದು ತಮ್ಮ ಅಕ್ಕ ಪಕ್ಕದ ಮನೆಯಲ್ಲಿ ಅಥವಾ ಇತರೆ ವಾಸ ಸ್ಥಳಗಳಲ್ಲಿ ವಾಸವಿದ್ದರೆ, ಅಂಥವರ ಮಾಹಿತಿಯನ್ನು ಸಾರ್ವಜನಿಕರು ಕೂಡಲೇ ಆರೋಗ್ಯ ಇಲಾಖೆ ಮತ್ತು ಕಂದಾಯ ಇಲಾಖೆ, ಪಟ್ಟಣ ಪಂಚಾಯ್ತಿ ಅಥವಾ ಪೊಲೀಸ್ ಇಲಾಖೆಗೆ ಮಾಹಿತಿ ನೀಡುವಂತೆ ತಾಲ್ಲೂಕು ಆಡಳಿತ ಮನವಿ ಮಾಡಿದೆ. ಡಾ. ನಾಗರಾಜ್ ಆರೋಗ್ಯಾಧಿಕಾರಿ -8971552887, ತಾಲ್ಲೂಕು ದಂಡಾಧಿಕಾರಿ ಡಾ. ನಾಗವೇಣಿ -99861 82944, ಸಿಪಿಐ ಮಂಜುನಾಥ ಪಂಡಿತ್- 94480803237, ಮುಖ್ಯಾಧಿಕಾರಿ ರಾಜು ಡಿ. ಬಣಕಾರ್ -9986290870, ಪೊಲೀಸ್ ಆರಕ್ಷಕ ಉಪ ನಿರೀಕ್ಷಕ ಸಂತೋಷ್ ಬಾಗೋಜಿ -94480803270 ಈ ದೂರವಾಣಿ ಸಂಖ್ಯೆಗಳಿಗೆ ಮಾಹಿತಿ ನೀಡುವಂತೆ ಪ.ಪಂ ಮುಖ್ಯಾಧಿಕಾರಿ ರಾಜು ಡಿ. ಬಣಕಾರ್ ತಿಳಿಸಿದ್ದಾರೆ.

# ಮಲೇಬೆನ್ನೂರು ಲಾಕ್‌ಡೌನ್‌ಗೆ ಸ್ಪಂದನೆ ಪರಸ್ಥಳದಿಂದ ಆಗಮಿಸುತ್ತಿರುವ ಜನರು



ಮಲೇಬೆನ್ನೂರು, ಏ.28- ಕೊರೊನಾ 2ನೇ ಅಲೆ ವ್ಯಾಪಿಸದಂತೆ ತಡೆಯಲು ರಾಜ್ಯ ಸರ್ಕಾರ ಹೇರಿರುವ 14 ದಿನಗಳ ಲಾಕ್‌ಡೌನ್ ಪ್ರಾರಂಭವಾದ ಮೊದಲ ದಿನ ಮಲೇಬೆನ್ನೂರು ಪಟ್ಟಣದಲ್ಲಿ ಉತ್ತಮ ಬೆಂಬಲ ವ್ಯಕ್ತವಾಯಿತು.

ಬೆಳಿಗ್ಗೆ 6 ರಿಂದ 10 ರವರೆಗೆ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ನೀಡಿರುವುದರಿಂದ ಜನರು ಆ ವೇಳೆಯಲ್ಲಿ ಸಮಾಧಾನವಾಗಿ ತಮಗೆ ಬೇಕಾದ ವಸ್ತುಗಳನ್ನು ಖರೀದಿಸಿದರು.

ಬೆಳಿಗ್ಗೆ 10 ಗಂಟೆಯ ನಂತರ ವರ್ತಕರು ಅಂಗಡಿ - ಮುಂಗಟ್ಟುಗಳನ್ನು ಸ್ವಯಂ ಪ್ರೇರಿತವಾಗಿ ಬಂದ್ ಮಾಡಿ, ಕರ್ಫ್ಯೂಗೆ ಬೆಂಬಲ ನೀಡಿದರು.

ಪೆಟ್ರೋಲ್ ಬಂಕ್, ಆಸ್ಪತ್ರೆ, ಮೆಡಿಕಲ್ ಷಾಪ್‌ಗಳು ಮಾತ್ರ ದಿನವಿಡೀ ತೆರೆದಿದ್ದವು. ವಿನಾಕಾರಣ ರಸ್ತೆಗೆ ಬಂದವರಿಗೆ ಪೊಲೀಸರು ಎಚ್ಚರಿಕೆ ನೀಡಿ, ಮನೆಗೆ ಕಳುಹಿಸಿದರು. ವಾಹನಗಳ ಓಡಾಟ ಕಡಿಮೆ ಇತ್ತು.

**ಅಧಿಕಾರಿಗಳ ದಾಳಿ :** ಉಪತಹಶೀಲ್ದಾರ್ ಆರ್.ರವಿ ಅವರ ನೇತೃತ್ವದಲ್ಲಿ ಅಧಿಕಾರಿಗಳು ಬಾಗಿಲು ಹಾಕಿಕೊಂಡು ಒಳಗಡೆ ವ್ಯಾಪಾರ ಮಾಡುತ್ತಿದ್ದ ಕೆಲವು ಅಂಗಡಿಗಳ ಮೇಲೆ ದಾಳಿ ಮಾಡಿ ಖಡಕ್ ಎಚ್ಚರಿಕೆ ನೀಡಿ, ಬೀಗ ಹಾಕಿದರು. ನಂತರ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ಜನರಿಗೂ ಲಾಕ್‌ಡೌನ್ ಬಗ್ಗೆ ಅರಿವು ಮೂಡಿಸಿದರು. ಕೆಲವರಿಗೆ ದಂಡವನ್ನೂ ಹಾಕಲಾಯಿತು.

ಕಳೆದ ವರ್ಷಕ್ಕೆ ಹೋಲಿಸಿದರೆ, ಈ ವರ್ಷ ಲಾಕ್‌ಡೌನ್‌ಗೆ ಜನರು ಉತ್ತಮ ಸ್ಪಂದನೆ ನೀಡಿದ್ದಾರೆ. ನಾಳೆಯಿಂದ ಲಾಕ್‌ಡೌನ್ ಇನ್ನೂ ಬಿಗಿಗೊಳ್ಳಲಿದೆ ಎಂದು ಉಪತಹಶೀಲ್ದಾರ್ ರವಿ ತಿಳಿಸಿದರು.

ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಮಹಾಲಿಂಗಪ್ಪ, ಸದಸ್ಯ ಬಿ.ಸುರೇಶ್, ಪಿಎಸ್‌ಐ ವೀರಬಸಪ್ಪ, ಪುರಸಭೆ ಅಧಿಕಾರಿಗಳಾದ ಉಮೇಶ್, ಗುರುಪ್ರಸಾದ್, ನವೀನ್, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಕೊಟ್ರೇಶ್ ಮತ್ತಿತರರು ಈ ವೇಳೆ ಹಾಜರಿದ್ದರು.

**ಒಬ್ಬರಿಗೆ ಪಾಸಿಟಿವ್ :** ಪಟ್ಟಣದಲ್ಲಿ ಬುಧವಾರ 40 ವರ್ಷದ ವ್ಯಕ್ತಿಗೆ ಕೊರೊನಾ ಸೋಂಕು ದೃಢಪಟ್ಟಿದ್ದು, ಮಂಗಳವಾರ ಕೊಮಾರನಹಳ್ಳಿ ಗ್ರಾಮದ ಒಂದೇ ಕುಟುಂಬದ ನಾಲ್ವರಿಗೆ ಪಾಸಿಟಿವ್ ಬಂದಿದೆ ಎಂದು ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಲಕ್ಷ್ಮಿದೇವಿ ತಿಳಿಸಿದರು.

ಆರೋಗ್ಯ ಕೇಂದ್ರದ ಸ್ಟಾಫ್ ನರ್ಸ್ ಒಬ್ಬರಿಗೂ ಪಾಸಿಟಿವ್ ಬಂದಿರುವುದು ಸೇರಿ ಪಟ್ಟಣದಲ್ಲಿ ಸೋಂಕಿತರ ಸಂಖ್ಯೆ 6ಕ್ಕೆ ಏರಿದೆ. ಸೋಂಕಿತರನ್ನು ಹರಿಹರ ಮತ್ತು ದಾವಣಗೆರೆ ಆಸ್ಪತ್ರೆಗಳಿಗೆ ಕಳುಹಿಸಿ ಕೊಡಲಾಗಿದೆ ಎಂದು ಹೇಳಲಾಗಿದೆ.

**ಆಗಮನ :** ಸರ್ಕಾರ 14 ದಿನಗಳ ಲಾಕ್‌ಡೌನ್ ಜಾರಿಗೊಳಿಸಿದ ಬೆನ್ನ ಹಿಂದೆಯೇ ಬೆಂಗಳೂರು ಸೇರಿದಂತೆ ಪರ ಊರುಗಳಲ್ಲಿ ಕೆಲಸ ಮಾಡುತ್ತಿದ್ದವರ ಪೈಕಿ ಅನೇಕರು ತಮ್ಮ ತಮ್ಮ ಹಳ್ಳಿಗಳಿಗೆ ಮಂಗಳವಾರ ರಾತ್ರಿ ಆಗಮಿಸಿದ್ದಾರೆ. ಬೇರೆ ಊರುಗಳಿಂದ ಆಗಮಿಸಿರುವವರ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದು, ಅವರನ್ನು ಹೋಂ ಕ್ವಾರಂಟೈನ್‌ಗೆ ಒಳಪಡಿಸಲಾಗುವುದೆಂದು ಜಿಗಳಿ ಗ್ರಾ.ಪಂ ಪಿಡಿಓ ದಾಸರ ರವಿ ತಿಳಿಸಿದ್ದಾರೆ.

ಮಲೇಬೆನ್ನೂರು ಪಟ್ಟಣಕ್ಕೆ ಬೇರೆ ಊರುಗಳಿಂದ ಬಂದಿರುವವರ ಮಾಹಿತಿ ಇನ್ನೂ ಸಿಕ್ಕಿಲ್ಲ. ಬುಧವಾರ ಅಂತಹವರನ್ನು ಪತ್ತೆ ಹಚ್ಚಿ, ಆರೋಗ್ಯ ಪರೀಕ್ಷೆ ಮಾಡಿ, ಹೋಂ ಕ್ವಾರಂಟೈನ್ ಮಾಡಲಾಗುವುದೆಂದು ವೈದ್ಯಾಧಿಕಾರಿ ಡಾ.ಲಕ್ಷ್ಮಿದೇವಿ ಮಾಹಿತಿ ನೀಡಿದರು.

## ಆನ್‌ಲೈನ್ : ವಿದ್ಯುತ್ ಬಿಲ್ ಪಾವತಿಸಿ

ರಾಣೇಬೆನ್ನೂರು, ಏ.28- ಕೊರೊನಾ ವೈರಸ್ ಹರಡುತ್ತಿರುವುದನ್ನು ತಡೆಗಟ್ಟುವ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಮನೆಯಿಂದಲೇ ಆನ್‌ಲೈನ್ ಮೂಲಕ (ಪೇಟಿಎಂ, ಗೂಗಲ್ ಪೇ, ಫೋನ್ ಪೇ, ಅಮೆಜಾನ್ ಪೇ) ವಿದ್ಯುತ್ ಬಿಲ್ ಪಾವತಿಸುವಂತೆ ಹೆಸ್ಕಾಂ ರಾಣೇಬೆನ್ನೂರು ವಿಭಾಗ ಮನವಿ ಮಾಡಿದೆ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ.: 98453 17181

**ನರ್ಸಿಂಗ್ ಹೋಮ್ ಮತ್ತು ಮಾಲ್‌ಗೆ ಯೋಗ್ಯ ಸ್ಥಳ ಮಾರಾಟಕ್ಕಿದೆ**
ಶಿವ ಪಾರ್ವತಿ ಬಡಾವಣೆಯಲ್ಲಿ 110 ಅಡಿ ರಿಂಗ್ ರೋಡ್‌ನಲ್ಲಿ ಮತ್ತು ಸರ್ಕಲ್‌ನಲ್ಲಿ 210x130 ಸೈಟು ಮಾರಾಟಕ್ಕಿದೆ.
ಮಾಸ್ಕ್ ಹಾಕಿ ಕೊರೊನಾ ಓಡಿಸಿ. ಸೈಟುಗಳಿಗೆ ಸಂಪರ್ಕಿಸಿ
ಐಗೂರು ಬಿ.ಆರ್. ವಿಜಯ್ ಕುಮಾರ್
99457 02495
ಸುರೇಶ್ 95911 60520

**ಸೈಟುಗಳು ಮಾರಾಟಕ್ಕಿವೆ**
ಎಸ್.ಎಸ್ 'ಬಿ' ಬ್ಲಾಕ್‌ನಲ್ಲಿ ಬಂಟರ ಕಲ್ಯಾಣ ಮಂಟಪ ಹತ್ತಿರ 27x40 East, 40x50 ಕಾರ್ನರ್, 29x50 South, 30x50 East, 30x40 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
25ನೇ ವರ್ಷದ
ಉಚಿತ ದಾಸೋಹ ವಿತರಣೆ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ದಿ.ಶ್ರೀ ಬಾಲನಾಗು ವೆಂಕಟರಾಜು ದಿ.ಶ್ರೀಮತಿ ರಾಮಲಕ್ಷ್ಮಿ ಇವರ ಜ್ಞಾಪಕಾರ್ಥವಾಗಿ
ಶ್ರೀ ವಾಣಿ ಶಿವಣ್ಣ ಮತ್ತು ಕುಟುಂಬ ವರ್ಗ ಇವರ ಸೇವಾರ್ಥ

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ.
(ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ದಾಟಿ ಹೊಸ ಬನಶಂಕರಿ ಲೇಔಟ್‌ನಲ್ಲಿ ಸೈಟ್‌ಗಳು ಮಾರಾಟಕ್ಕಿವೆ.
30x40 West, 40 ಅಡಿ ರೋಡಿಗಿದೆ, 30x57, 30x57, East ಅಕ್ಕ-ಪಕ್ಕ, 30x50 West, 42x60 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**S.P. Enterprises**
Solar water heater, Chimney, UPS, Battery, Solar Roof ,Top Water Purifier, Sales & Service.
Exchange Any Brand. DVG
Mo: 63642 27321
99646 13790

**ಹೋಟೆಲ್ ಅಯೋಧ್ಯಾ**
ದೊಡ್ಡಪೇಟೆ, ದಾವಣಗೆರೆ.
ತಿಂಡಿ, ಊಟ ಪಾರ್ಸಲ್‌ಗೆ ಸಂಪರ್ಕಿಸಿ
99160 62963
99801 70600

**ಸೋಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾಸೆಟ್, ಡ್ಯುರೋಫ್ಲೆಕ್ಸ್ ಬೆಡ್, ಕಿಟಕಿಗೆ ಅಲ್ಯೂಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
SWAPNA CUSHION WORK
Behind Vittal Temple, Maharaj Pet, Davanagere.
98445 81966

**Wanted Dealers**
ANU Solar Pvt Ltd
P.J. Extn, Davanagere.
Contact
99645 11172
99649 68999

**ಸಮಯ ಬದಲಾವಣೆ**
ಸಕ್ಕರೆ ಕಾಯಿಲೆಯವರ ಅನುಕೂಲಕ್ಕಾಗಿ ಆಲೂರು ಆಸ್ಪತ್ರೆಯು ಬೆಳಿಗ್ಗೆ 7 ರಿಂದ 10 ಗಂಟೆಯವರೆಗೆ ಮತ್ತು ಬೆಳಿಗ್ಗೆ 11 ರಿಂದ 2 ಗಂಟೆಯವರೆಗೆ ಲಭ್ಯವಿರುತ್ತದೆ.
ಮೊ. : 88677 75564

**S V ಸಿರಿಧಾನ್ಯ FOOD PRODUCT**
ನಮ್ಮಲ್ಲೇ ಶುದ್ಧ ಕೊಬ್ಬರಿ, ಕುಸುಬಿ, ಶೇಂಗಾ ಎಣ್ಣೆಯಿಂದ ತಯಾರಿಸಿದ ಸಿರಿಧಾನ್ಯದ ಸ್ಪೆಷಲ್ ಖಾರ, ಬೆಳ್ಳುಳ್ಳಿ ಖಾರ, ರಾಗಿ ಖಾರ ದೊರೆಯುತ್ತದೆ. ಡೋರ್ ಡೆಲಿವರಿ ಸೌಲಭ್ಯವಿರುತ್ತದೆ. ಹಾಗೂ ಅಂಗಡಿಗಳಲ್ಲಿ ಮಾರಲು ಹೋಲ್ ಸೇಲ್ ದರದಲ್ಲಿಯೂ ನೀಡಲಾಗುವುದು.
ಸಂಪರ್ಕಿಸಿ : 63602 12026

**ಹಳೆ ತಗಡು ಬೇಕಾಗಿದೆ**
ನೀವು ಉಪಯೋಗಿಸಿದ ಹಳೆ ತಗಡು ತೆಗೆದುಕೊಳ್ಳುತ್ತೇವೆ. (ಕಲರ್ ಶೀಟ್, ಜಂಕ್ ಶೀಟ್, ಸಿಮೆಂಟ್ ಶೀಟ್)
80730 55886
99644 68051 (ವ್ಯಾಟ್ಸಾಪ್)

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**S V ಸಿರಿಧಾನ್ಯ FOOD PRODUCT**
ನಮ್ಮಲ್ಲೇ ತಯಾರಿಸಿದ ಸಿರಿಧಾನ್ಯದ, ದ್ವಿದಳ ಧಾನ್ಯದ ಸ್ಪೆಷಲ್ ಮಾಲ್ಟ್, ಸಿರಿಧಾನ್ಯದ ಚಪಾತಿ ಹಿಟ್ಟು, ಸಿರಿಧಾನ್ಯದ ರೊಟ್ಟಿ ಹಿಟ್ಟು ದೊರೆಯುತ್ತದೆ. ಡೋರ್ ಡೆಲಿವರಿ ಸೌಲಭ್ಯವಿರುತ್ತದೆ ಹಾಗೂ ಅಂಗಡಿಗಳಲ್ಲಿ ಮಾರಲು ಹೋಲ್ ಸೇಲ್ ದರದಲ್ಲಿಯೂ ನೀಡಲಾಗುವುದು.
ಸಂಪರ್ಕಿಸಿ : 63602 12026

**ಸುವರ್ಣಾವಕಾಶ**
ಯುವಕ/ಯುವತಿಯರಿಗೆ, ವಿದ್ಯಾರ್ಥಿಗಳಿಗೆ, ನಿರುದ್ಯೋಗಿಗಳಿಗೆ, ಗೃಹಿಣಿಯರಿಗೆ, ಉದ್ಯೋಗಸ್ಥರಿಗೆ ಯಾವುದೇ ಬಂಡವಾಳವಿಲ್ಲದೆ ನಿಮ್ಮ ಬಿಡುವಿನ ವೇಳೆಯಲ್ಲಿ ತಿಂಗಳಿಗೆ 25 ಸಾವಿರದಿಂದ 1 ಲಕ್ಷದ ವರೆಗೆ ಗಳಿಸುವ ನಿಮ್ಮ ಕನಸುಗಳನ್ನು ನನಸು ಮಾಡಿಕೊಳ್ಳುವ ಅದ್ಭುತ ಸುವರ್ಣಾವಕಾಶ. ಸಂಪರ್ಕಿಸಿ :
93435 46891, 70194 26891

**ಜಮೀನು ಕೊಳ್ಳಲು ಬೇಕಾಗಿರುತ್ತದೆ.**
ಹರಿಹರ, ಬಾತಿ, ಕೊಂಡಜ್ಜಿ
74112 50447

**ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆ ಗ್ಲಾಸ್ ಹೌಸ್ ಹತ್ತಿರ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ 30x50 ಅಳತೆಯುಳ್ಳ ಪಶ್ಚಿಮ ದಿಕ್ಕಿನಲ್ಲಿರುವ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ
90198 88512
96111 50888

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.


**State Bank of India**
'ಜನ್‌ಧನ್ ಖಾತೆ' ಮಾಡಲಾಗುತ್ತದೆ
(10 ವರ್ಷ ಮೇಲಿನವರಿಗೆ)
ಸಮಯ : ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ
Old B.S. ಚನ್ನಬಸಪ್ಪ & ಸನ್ಸ್ ಹಿಂಭಾಗ, # 264/1, ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
ಸಂಪರ್ಕಿಸಿ : 99806 10005

**ಓಂ ಶ್ರೀ ಕಾಳಿ ಸ್ವರಭವಿಷ್ಯ**
ನುಡಿದಂತೆ ನಡೆಯುವರು.
ಪಂಡಿತ್ ಕಾಳಿಪ್ರಸಾದ್
ಇವರು ಅಘೋರ ನಾಗಸಾಧು
ಬ್ರಹ್ಮವಿದ್ಯೆಯಿಂದ 3 ಗಂಟೆಯಲ್ಲಿ ಪರಿಹಾರ. ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿದ್ದರೂ ಇಂದೇ ಕರೆ ಮಾಡಿ.
ಮೊ: 9591984627

**ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥ ಸ್ವಾಮಿ ಜ್ಯೋತಿಷ್ಯಾಲಯ**
ಪಂಡಿತ್ ಚಂದ್ರಶೇಖರ್ ಗುರೂಜಿ
ನಂಬರ್ ಒನ್ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ದಾಂಪತ್ಯ ಸಮಸ್ಯೆ, ಸ್ತ್ರೀ-ಪುರುಷ ವಶೀಕರಣ ಇನ್ನೂ ಯಾವುದೇ ಸಮಸ್ಯೆಗಳಿದ್ದರೂ 3ದಿನದಲ್ಲಿ ಶಾಶ್ವತ ಪರಿಹಾರ. ಆಗದಿದ್ದಲ್ಲಿ ಹಣ ವಾಪಸ್
ಮೊ: 99800 57857

**UPS BATTERY & RO PURIFIERS**
Sales & Service
PEACE ENTERPRISES
83100 42490, 99013 18277
98801 56667

**JOBS**
MCS ACADEMY
Training & Placement Cell
98444 92888



**ಭಾವಪೂರ್ಣ ಶ್ರದ್ಧಾಂಜಲಿ**
ದಿನಾಂಕ 28.04.2021ರಂದು ನಿಧನರಾದ
ಲೈಫ್ ಲೈನ್ ಸ್ವಯಂ ಪ್ರೇರಿತ ರಕ್ತದಾನಿಗಳ ಸಮೂಹದ ಗೌರವಾಧ್ಯಕ್ಷರೂ, ನಿವೃತ್ತ ಹಿರಿಯ ಸರ್ಕಾರಿ ವೈದ್ಯರೂ ಆದ
ಡಾ. ಎಂ. ಟಿ. ದೇವೇಂದ್ರಪ್ಪ
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರುಗಳ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.
ಕರ್ನಾಟಕ ಹಿಮೋಫಿಲಿಯ ಸೊಸೈಟಿ, ಲೈಫ್ ಲೈನ್ ರಕ್ತ ಭಂಡಾರ, ದಾವಣಗೆರೆ.

# ಎರಡನೇ ಅಲೆ : ಜನ ಜಾಗೃತಿ ಅಗತ್ಯ



**ಜಗಳೂರು ತಹಶೀಲ್ದಾರ್ ಡಾ.ನಾಗವೇಣಿ**

ಜಗಳೂರು, ಏ.28- ತಾಲ್ಲೂಕು ಮಟ್ಟದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಕೋವಿಡ್ ಎರಡನೆ ಅಲೆಯ ನಿಯಂತ್ರಣಕ್ಕಾಗಿ ಸಮರೋಪಾದಿಯಲ್ಲಿ ಶ್ರಮಿಸಬೇಕು ಎಂದು ತಹಶೀಲ್ದಾರ್ ಡಾ. ನಾಗವೇಣಿ ತಿಳಿಸಿದರು.

ಪಟ್ಟಣದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ನಡೆದ ಕೋವಿಡ್ ಟಾಸ್ಕ್‌ಫೋರ್ಸ್ ಸಮಿತಿ ಸಭೆಯನ್ನುದ್ದೇಶಿಸಿ ಮಾತನಾಡಿದರು.

ತಾಲ್ಲೂಕಿನಲ್ಲಿ 125 ಪ್ರಕರಣಗಳಲ್ಲಿ 88 ಸಕ್ರಿಯವಾಗಿದ್ದು ಐಸೋಲೇಷನ್ 36, ಉಳಿದಂತೆ ಹೋಂ ಕ್ವಾರಂಟೈನ್ ಆಗಿದ್ದು ಪ್ರತಿಯೊಬ್ಬರೂ ಜಾಗೃತರಾಗಬೇಕು ಎಂದು ತಿಳಿಸಿದರು.

ಪಾಸಿಟಿವ್ ಪ್ರಕರಣ ಬಂದಿರುವ ಸ್ಥಳಕ್ಕೆ ಸ್ಥಳಿಯ ಟಾಸ್ಕ್‌ಫೋರ್ಸ್ ಸಮಿತಿ ಯವರು ಭೇಟಿ ನೀಡಿ ಪ್ರಾಥಮಿಕ ವರದಿ ಪಡೆದು ಉನ್ನತ ಅಧಿಕಾರಿಗಳಿಗೆ ತಿಳಿಸ ಬೇಕು. ಪೊಲೀಸ್ ಇಲಾಖೆ ಅಧಿಕಾರಿ ಗಳು ಸಾಮೂಹಿಕ ಸಭೆ, ಸಮಾರಂಭ ನಡೆಸದಂತೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು ಎಂದರು. 40 ವರ್ಷ ಮೇಲ್ಪಟ್ಟ ವಯೋಮಾನದವರು ಕೋವಿಡ್ ಲಸಿಕೆಯನ್ನು ಕಡ್ಡಾಯವಾಗಿ ಹಾಕಿಸಿಕೊಳ್ಳಬೇಕು. ಪ್ರತಿಯೊಬ್ಬರೂ ಸರ್ಕಾರದ ಲಾಕ್‌ಡೌನ್‌ಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ತಾ.ಪಂ ಇಓ ಮಲ್ಲಾನಾಯ್ಕ, ಪೊಲೀಸ್ ವೃತ್ತ ನಿರೀಕ್ಷಕ ಮಂಜುನಾಥ್ ಪಂಡಿತ್, ಪ.ಪಂ. ಮುಖ್ಯಾಧಿಕಾರಿ ರಾಜು ಡಿ. ಬಣಕಾರ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ, ಬಿಸಿಎಂ ಇಲಾಖೆಯ ವೆಂಕಟೇಶ್‌ಮೂರ್ತಿ ಸೇರಿದಂತೆ, ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಜನತಾ ಕರ್ಫ್ಯೂ : ಸಂಪೂರ್ಣ ಸ್ತಬ್ಧ



ಹರಪನಹಳ್ಳಿ

ಹರಪನಹಳ್ಳಿ, ಏ.28- ಕೊರೊನಾ ಸೋಂಕು ಹರಡದಂತೆ ಮುನ್ನೆಚ್ಚರಿಕೆ ಕ್ರಮವಾಗಿ ರಾಜ್ಯ ಸರ್ಕಾರ ಕರೆ ನೀಡಿದ 14 ದಿನಗಳ ಜನತಾ ಕರ್ಫ್ಯೂಗೆ ಮೊದಲ ದಿನ ಹರಪನಹಳ್ಳಿ ತಾಲ್ಲೂಕಿನ ಜನರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಇಡೀ ಪಟ್ಟಣ ಸ್ತಬ್ಧವಾಗಿತ್ತು.

ಆಸ್ಪತ್ರೆ, ಔಷಧಿ ಅಂಗಡಿಗಳನ್ನು ಹೊರತುಪಡಿಸಿ ಉಳಿದಂತೆ ಸಂತೆ ಪೇಟೆ ಬೀದಿ ಬದಿಯ ತರಕಾರಿ, ಹೂವು, ಹಣ್ಣು, ಚಿಕ್ಕಪುಟ್ಟ ಚಹಾ ಪಾಯಿಂಟ್‌ಗಳು, ಪಾನ್ ಬೀಡಾ ಅಂಗಡಿಗಳು, ಬಾರ್ ಅಂಡ್ ರೆಸ್ಟೋರೆಂಟ್‌ಗಳು, ದಿನಸಿ ಅಂಗಡಿಗಳು, ಹೋಟೆಲ್‌ಗಳು, ಬೇಕರಿಗಳು, ಕಟ್ಟಿಂಗ್ ಶಾಪ್‌ಗಳು, ಬಟ್ಟೆ, ಬಂಗಾರದ ಅಂಗಡಿಗಳನ್ನು ಮಾಲೀಕರು ಸ್ವಯಂಪ್ರೇರಿತವಾಗಿಯೇ ಮುಚ್ಚಿ ಜನತಾ ಕರ್ಫ್ಯೂಗೆ ಬೆಂಬಲ ಸೂಚಿಸಿದ್ದರು.

ಪಟ್ಟಣದಲ್ಲಿ ಬಸ್, ಆಟೋ, ಕಾರ್‌ಗಳ ಸಂಚಾರ ಸಂಪೂರ್ಣ ಸ್ಥಗಿತಗೊಂಡು ಬಸ್ ನಿಲ್ದಾಣ ಸೇರಿದಂತೆ ಎಲ್ಲಾ ರಸ್ತೆಗಳು ಬಿಕೋ ಎನ್ನುತ್ತಿದ್ದವು.


ಕೊರೊನಾ ವೈರಸ್ ತಡೆಗೆ ತಾಲ್ಲೂಕು ಉಪವಿಭಾಗಾಧಿಕಾರಿ ಚಂದ್ರಶೇಖರಯ್ಯ, ಡಿವೈಎಸ್ಪಿ ಹಾಲಮೂರ್ತಿ ರಾವ್, ತಹಶೀಲ್ದಾರ್ ಎಂ.ಎಲ್. ನಂದೀಶ್, ವೃತ್ತ ನಿರೀಕ್ಷಕ ನಾಗರಾಜ್ ಎಂ. ಕಮ್ಮಾರ್, ಪಿಎಸ್‌ಐ ಸಿ. ಪ್ರಕಾಶ್, ಆರೋಗ್ಯಾಧಿಕಾರಿ ವೆಂಕಟೇಶ್, ಪುರಸಭೆ ಮುಖ್ಯಾಧಿಕಾರಿ ಬಿ.ಆರ್. ನಾಗರಾಜ್ ನಾಯ್ಕ್, ತಾಲ್ಲೂಕು ಆಡಳಿತ ನೇತೃತ್ವದ ತಂಡಗಳು ತಾಲ್ಲೂಕಿನಾದ್ಯಂತ ತೀವ್ರ ಕಟ್ಟೆಚ್ಚರ ವಹಿಸಿದ್ದು, ಎತ್ತ ನೋಡಿದರತ್ತ ಖಾಕಿ ಪಡೆಯ ಕಣ್ಗಾವಲು ಎದ್ದು ಕಾಣುತ್ತಿತ್ತು.

**ಶ್ರೀಮತಿ ಅಂಗಡಿ ಜಯಮ್ಮ ನಿಧನ**



ದಾವಣಗೆರೆ ದೊಡ್ಡಪೇಟೆ ಜುಮ್ಮಾ ಮಸೀದಿ ಗಲ್ಲಿ ವಾಸಿ ದಿ|| ಅಂಗಡಿ ಕರಿಬಸಪ್ಪ ಅವರ ಧರ್ಮಪತ್ನಿ, ನ್ಯೂಸ್ ಪೇಪರ್ ಮಾರಾಟಗಾರರಾದ ಶಿವಬಸಪ್ಪ ಮತ್ತು ಮಹಾರುದ್ರಪ್ಪ ಅವರ ಮಾತೋಶ್ರೀ ಶ್ರೀಮತಿ ಅಂಗಡಿ ಜಯಮ್ಮ ಅವರು ದಿನಾಂಕ 28.4.2021ರ ಬುಧವಾರ ಬೆಳಗ್ಗೆ 7.30ಕ್ಕೆ ನಿಧನರಾದರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 28.4.2021ರ ಬುಧವಾರ ಮಧ್ಯಾಹ್ನ 1 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

**ವೈ. ರತ್ನಾಕರ ಶೆಟ್ಟಿ ನಿಧನ**



ಮಾಲೀಕರಾದ ನಾಗರಾಜ್ ಪ್ರಾವಿಜನ್ ಸ್ಟೋರ್ಸ್, ವಿಜಯಲಕ್ಷ್ಮೀ ರೋಡ್, ದಾವಣಗೆರೆ ವಾಸಿಯಾದ ಶ್ರೀ ವೈ. ರತ್ನಾಕರ ಶೆಟ್ಟಿ (81) ಇವರು, ದಿನಾಂಕ : 28.04.2021ರ ಬುಧವಾರ ಮಧ್ಯಾಹ್ನ 1.15ಕ್ಕೆ ದೈವಾಧೀನರಾಗಿರುತ್ತಾರೆ. 3 ಜನ ಗಂಡು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 28.04.2021ರಂದೇ ಸಂಜೆ 5.00 ಗಂಟೆಗೆ ಆರ್.ಹೆಚ್. ಬೃಂದಾವನದಲ್ಲಿ ನೆರವೇರಿಸಲಾಯಿತು.

**ಮಲ್ಲಮ್ಮ ಪಂಚಪ್ಪನವರ್ ನಿಧನ**



ದಾವಣಗೆರೆ ಕೊಂಡಜ್ಜಿ ರಸ್ತೆಯ ಅಶೋಕ ನಗರದ ವಾಸಿ ಶ್ರೀಮತಿ ಮಲ್ಲಮ್ಮ (65) ಅವರು ದಿನಾಂಕ 28.04.2021ರ ಬುಧವಾರ ಸಂಜೆ 7.30 ಕ್ಕೆ ನಿಧನರಾದರು. ಮಲ್ಲಮ್ಮ, ಹೂವಿನ ವ್ಯಾಪಾರಿಯಾಗಿದ್ದ ದಿ|| ವಿರೂಪಾಕ್ಷಪ್ಪ ಪಂಚಪ್ಪನವರ್ ಅವರ ಪತ್ನಿ. ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.04.2021ರ ಗುರುವಾರ ಮಧ್ಯಾಹ್ನ 2 ಗಂಟೆಗೆ ರುದ್ರಭೂಮಿಯಲ್ಲಿ ನಡೆಯಲಿದೆ.

# ನಗರ ಮೌನ.. ಸಮಸ್ಯೆಗಳಲ್ಲಿ ಜನ...

(1ನೇ ಪುಟದಿಂದ) ರಸ್ತೆಯಲ್ಲಿ ರಿಟೇಲ್ ತರಕಾರಿ ಮಾರಲು ಅವಕಾಶವಿರಲಿಲ್ಲ. ಹೈಸ್ಕೂಲ್ ಮೈದಾನದಲ್ಲಿ ತಾತ್ಕಾಲಿಕವಾಗಿ ನಿರ್ಮಿಸಲಾಗಿರುವ ಖಾಸಗಿ ಹಾಗೂ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣಗಳು ಖಾಲಿಯಾಗಿದ್ದವು. ಅಡ್ಡಲಾಗಿ ಬ್ಯಾರಿಕೇಡ್ ಹಾಕಲಾಗಿತ್ತು.

ಔಷಧಿ ಅಂಗಡಿಗಳು ಹಾಗೂ ಪೆಟ್ರೋಲ್ ಬಂಕ್‌ಗಳು ದಿನಪೂರ್ತಿ ತೆರೆಯಲ್ಪಟ್ಟಿದ್ದವು. ಆದರೆ ಗ್ರಾಹಕರ ಸಂಖ್ಯೆ ವಿರಳವಾಗಿತ್ತು.

ಬೆಳಿಗ್ಗೆ ಕೃಷಿ ಚಟುವಟಿಕೆ ಹಾಗೂ ಕಟ್ಟಡ ನಿರ್ಮಾಣ ಚಟುವಟಿಕೆಗಳಿಗೆ ಸಂಬಂಧಿಸಿದ ಮಳಿಗೆಗಳು ತೆರೆಯಲ್ಪಟ್ಟಿದ್ದವಾದರೂ ನಂತರ ಅವುಗಳನ್ನೂ ಮುಚ್ಚಿಸಲಾಯಿತು. ಅನಗತ್ಯವಾಗಿ ಜನತೆ ಅಡ್ಡಾಡದಂತೆ ಪೊಲೀಸರು ನಿಗಾ ವಹಿಸಿದ್ದರು. ವಾಹನ ಸವಾರರನ್ನು ತಡೆದು ಕಾರಣ ಕೇಳುತ್ತಿದ್ದರು.

ಮಂಡಿಪೇಟೆ, ಗಡಿಯಾರ ಕಂಬ, ಪಿ.ಬಿ. ರಸ್ತೆ, ಕಾಳಿಕಾದೇವಿ ರಸ್ತೆ, ಹದಡಿ ರಸ್ತೆ, ಜಯದೇವ ವೃತ್ತ, ಅಶೋಕ ರಸ್ತೆ ಸೇರಿದಂತೆ ಪ್ರಮುಖ ರಸ್ತೆ, ವೃತ್ತಗಳು ಜನರಿಲ್ಲದೆ ಬಿಕೋ ಎನ್ನುತ್ತಿದ್ದವು.

**ಕಬ್ಬಿಣ, ಸಿಮೆಂಟ್ ಅಂಗಡಿ ಮಾಲೀಕರಲ್ಲಿ ಗೊಂದಲ:** ಕಬ್ಬಿಣ-ಸಿಮೆಂಟ್ ಸೇರಿದಂತೆ ಕಟ್ಟಡ ನಿರ್ಮಾಣ ಸಾಮಗ್ರಿಗಳ ಮಳಿಗೆ ತೆರೆಯಲು ಅನುಮತಿ ಇದೆ ಎಂದು ಮಳಿಗೆ ತೆರೆದು ವ್ಯಾಪಾರ ಆರಂಭಿಸಿದ್ದರು. ಆದರೆ ಪೊಲೀಸರು ಮಳಿಗೆ ಮುಚ್ಚಿಸುತ್ತಿದ್ದಾರೆ ಎಂದು ಕೆಲ ವ್ಯಾಪಾರಸ್ಥರು ಆರೋಪಿಸಿದರು. ಬಡಾವಣೆಗಳ ಒಳಗಡೆ ಕಟ್ಟಡ ನಿರ್ಮಾಣ ಕಾಮಗಾರಿಗಳು ಎಂದಿನಂತೆ ನಡೆದವು. ಬ್ಯಾಂಕುಗಳು ಬದಲಾದ ಸಮಯದಲ್ಲಿ ಹಾಗೂ ಸರ್ಕಾರಿ ಕಚೇರಿಗಳು ಎಂದಿನಂತೆ ಕಾರ್ಯನಿರ್ವಹಿಸಿದವು.

# ಬಾರದ ಲಸಿಕೆ, ಜನತೆ ತಳಮಳ

(1ನೇ ಪುಟದಿಂದ) ಲಸಿಕಾ ಕೇಂದ್ರಗಳಿಗೆ ಭೇಟಿ ನೀಡಿದಾಗ ಲಸಿಕೆ ಇಲ್ಲ ಎಂಬ ಉತ್ತರ ಬರುತ್ತಿದೆ ಎಂದು ನಿಟುವಳ್ಳಿಯ ಹಿರಿಯ ನಾಗರಿಕರೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು. ಜಿಲ್ಲಾಸ್ಪತ್ರೆ, ತಾಲ್ಲೂಕು ಆರೋಗ್ಯ ಕೇಂದ್ರಗಳು ಹಾಗೂ ಉಪ ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ಪಡೆಯಲು ಟೋಕನ್ ಸಿಸ್ಟಂ ಮಾಡಲಾಗಿದೆ. ಆದರೂ ಜನತೆ ದಿನಗಟ್ಟಲೇ ಲಸಿಕೆಗಾಗಿ ಕಾಯಬೇಕಾಗಿದೆ.

ಜಿಲ್ಲೆಯಲ್ಲಿ 45 ವರ್ಷ ಮೇಲ್ಪಟ್ಟವರಿಗೆ ಇಲ್ಲಿಯವರೆಗೆ 1,55,204 ಜನರಿಗೆ ಲಸಿಕೆ ನೀಡಲಾಗಿದೆ. 1,86,667 ಆರೋಗ್ಯ ಮತ್ತು ಫ್ರಂಟ್‌ಲೈನ್ ಉದ್ಯೋಗಿಗಳಿಗೆ ಲಸಿಕೆ ನೀಡಲಾಗಿದೆ.

ಜಿಲ್ಲೆಯಲ್ಲಿ ಜನರು ಸ್ವಯಂಪ್ರೇರಿತರಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಲಸಿಕೆ ಪಡೆಯಲು ಬರುತ್ತಿದ್ದು, ಪ್ರಸ್ತುತ ದಿನಕ್ಕೆ 13 ಸಾವಿರ ಜನರಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿದೆ. ಮುಂದಿನ ದಿನಗಳಲ್ಲಿ 20 ಸಾವಿರದವರೆಗೆ ಲಸಿಕೆ ನೀಡಲು ಅಗತ್ಯವಾದ ಲಸಿಕೆಗಳನ್ನು ಸರಬರಾಜು ಮಾಡಬೇಕೆಂದು ಅಧಿಕಾರಿಗಳು ಉಸ್ತುವಾರಿ ಸಚಿವರಲ್ಲಿ ಕೋರಿದ್ದಾರೆ.

# ಗ್ಯಾರೇಜ್ ನಿರ್ಬಂಧ, ಸಾಗಾಣಿಕೆ ಪಂಕ್ಚರ್


(1ನೇ ಪುಟದಿಂದ) ಇದರಿಂದಾಗಿ ಚಾಲಕರು ಕೆಲಸಕ್ಕೆ ಬರುವುದಿಲ್ಲ ಎಂದು ಹೇಳುತ್ತಿದ್ದಾರೆ ಎಂದವರು ಹೇಳಿದ್ದಾರೆ.

ಜಿಲ್ಲಾಡಳಿತದ ಬಳಿ ಈ ಬಗ್ಗೆ ಮನವಿ ಸಲ್ಲಿಸಲಾಗಿದೆ. ಆದರೆ, ಬೆಳಿಗ್ಗೆ 6ರಿಂದ 10ರವರೆಗೆ ಮಾತ್ರ ಪಂಕ್ಚರ್ ಹಾಗೂ ಗ್ಯಾರೇಜ್‌ಗಳಿಗೆ ಅನುಮತಿ ನೀಡುವುದಾಗಿ ತಿಳಿಸಲಾಗಿದೆ. ಇದು ಸಾಗಾಣಿಕೆಗೆ ತೊಡಕಾಗುತ್ತಿದೆ ಎಂದವರು ಹೇಳಿದ್ದಾರೆ. ಗೊಬ್ಬರದ ಅಂಗಡಿಗಳಿಗೆ ರಾತ್ರಿ 9 ರವರೆಗೂ ಕಾರ್ಯನಿರ್ವಹಣೆಗೆ ಅನುಮತಿ ನೀಡಲಾಗಿದೆ ಎಂಬ ಮಾಹಿತಿ ಇದೆ. ಅದೇ ರೀತಿ ಪಂಕ್ಚರ್ ಹಾಗೂ ಗ್ಯಾರೇಜ್‌ಗಳಿಗೂ ಅನುಮತಿ ನೀಡಿ ಸಾಗಾಣಿಕೆಗೆ ಸಹಕರಿಸಬೇಕು ಎಂದವರು ಒತ್ತಾಯಿಸಿದ್ದಾರೆ.

# ಜಿಲ್ಲೆಯಲ್ಲಿಂದು 3 ಸಾವು, 196 ದೃಢ

(1ನೇ ಪುಟದಿಂದ) ಬಿಡುಗಡೆಯಾಗಿ ದ್ದಾರೆ. ನಗರದ ಎಸ್.ಎಸ್. ಹೈಟೈಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಹರಿಹರದ ಇಂದಿರಾ ನಗರದ 43 ವರ್ಷದ ಮಹಿಳೆ, ದಾವಣಗೆರೆ ಜಯನಗರದ 46 ವರ್ಷದ ಪುರುಷ, ನಿಜಲಿಂಗಪ್ಪ ಬಡಾವಣೆಯ 78 ವರ್ಷದ ಮಹಿಳೆ ಸೋಂಕಿನಿಂದ ಮೃತಪಟ್ಟಿದ್ದಾರೆ. ಜಿಲ್ಲೆಯಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 1624ಕ್ಕೆ ಏರಿಕೆಯಾಗಿದ್ದು, ಇಲ್ಲಿಯವರೆಗೆ 271 ಜನರು ಸಾವನ್ನಪ್ಪಿದ್ದಾರೆ.


# ಡಾ.ದೇವೇಂದ್ರಪ್ಪ ನಿಧನಕ್ಕೆ ಸಂತಾಪ



ದಾವಣಗೆರೆ, ಏ.28- ಕರ್ನಾಟಕ ಹಿಮೋಫಿಲಿಯಾ ಸೊಸೈಟಿಯ ಕಾರ್ಯಕಾರಿ ಸಮಿತಿ ಸದಸ್ಯರೂ, ಲೈಫ್‌ಲೈನ್ ರಕ್ತ ಭಂಡಾರದ ಅಧಿಕಾರಿಯಾಗಿದ್ದ ಡಾ. ಎಂ.ಟಿ.ದೇವೇಂದ್ರಪ್ಪ ಅವರ ನಿಧನಕ್ಕೆ ಹಿಮೋಫಿಲಿಯಾ ಸೊಸೈಟಿ ಹಾಗೂ ಲೈಫ್‌ಲೈನ್ ಸಂಸ್ಥೆಯವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಸ್ವಯಂ ಕಾರ್ಯಕರ್ತರಾಗಿ ಹಿಮೋಫಿಲಿಯಾ ರೋಗಿಗಳ ಚಿಕಿತ್ಸೆಯಲ್ಲಿ ನೆರವಾಗಿದ್ದ ಅವರ ಸೇವೆ ಅವಿಸ್ಮರಣೀಯ ಎಂದು ಸಂತಾಪದಲ್ಲಿ ತಿಳಿಸಲಾಗಿದೆ. ಸೊಸೈಟಿ ಗೌರವಾಧ್ಯಕ್ಷೆ ಕಿರುವಾಡಿ ಗಿರಿಜಮ್ಮ, ಅಧ್ಯಕ್ಷ ಡಾ.ಸುರೇಶ್ ಹನಗವಾಡಿ, ಉಪಾಧ್ಯಕ್ಷ ಡಾ. ಬಿ.ಟಿ.ಅಚ್ಯುತ್, ಸಂಜೀವ್ ಹೆಗಡೆ, ಮಹಿಳಾ ವಿಭಾಗದ ಅಧ್ಯಕ್ಷೆ ಡಾ. ಮೀರಾ ಹನಗವಾಡಿ, ಕಾರ್ಯನಿರ್ವಾಹಕ ನಿರ್ದೇಶಕ ಡಾ. ಸದಾಶಿವಪ್ಪ ಮತ್ತು ಸಿಬ್ಬಂದಿ ಶೋಕ ವ್ಯಕ್ತಪಡಿಸಿದ್ದಾರೆ.

# ಲಕ್ಷಣ-ಹರಡುವಿಕೆ ಬದಲಿಸಿದ ಕೊರೊನಾ

## ಎರಡನೆ ಅಲೆಯಲ್ಲಿ ತಲೆನೋವು, ಕಣ್ಣು ಕೆಂಪು, ವಾಂತಿ - ಭೇದಿ ಹೆಚ್ಚು
## ಸೋಂಕಿದ್ದರೂ ಆರ್‌ಟಿ - ಪಿಸಿಆರ್‌ನಲ್ಲಿ ನೆಗೆಟಿವ್



ದಾವಣಗೆರೆ, ಏ. 28 - ಕೊರೊನಾ ಮೊದಲ ಅಲೆಗೆ ಹೋಲಿಸಿದರೆ, ಎರಡನೇ ಅಲೆಯಲ್ಲಿ ಸೋಂಕು ಲಕ್ಷಣಗಳು ಬದಲಾಗಿದ್ದು, ಇದು ಜಿಲ್ಲಾಡಳಿತ ಹಾಗೂ ರೋಗಿಗಳಿಗೆ ಹೊಸ ಸವಾಲುಗಳನ್ನು ತಂದಿದೆ.

ಮೊದಲ ಅಲೆ ಬಂದಾಗ ಕೆಮ್ಮು, ಶೀತ, ಜ್ವರ ಮುಂತಾದ ಲಕ್ಷಣಗಳು ಕಂಡು ಬರುತ್ತಿದ್ದವು. ಆದರೆ, ಎರಡನೇ ಅಲೆಯಲ್ಲಿ ತಲೆನೋವು, ಕಣ್ಣು ಕೆಂಪಗಾಗುವುದು, ವಾಂತಿ - ಭೇದಿಯಂತಹ ಲಕ್ಷಣಗಳು ಕಂಡು ಬರುತ್ತಿವೆ.

ಈ ವಿಷಯ ತಿಳಿಸಿರುವ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಲಕ್ಷಣಗಳು ಅರ್ಥವಾಗದೇ ಹಲವರು ಕೊರೊನಾ ಪರೀಕ್ಷೆಗೆ ಒಳಗಾಗುತ್ತಿಲ್ಲ. ಕೊನೆಗೆ ಆಸ್ಪತ್ರೆಗೆ ಬರುವ ವೇಳೆಗೆ ಶ್ವಾಸಕೋಶಕ್ಕೆ ಸೋಂಕಿನಿಂದ ಸಂಪೂರ್ಣ ಹಾನಿಯಾಗಿರುತ್ತದೆ ಎಂದಿದ್ದಾರೆ.

ವೈದ್ಯಕೀಯ ಪರಿಣಿತರ ಸಮಿತಿ ಈ ವಿಷಯಗಳನ್ನು ಪರಿಗಣಿಸಿದ್ದು, ಈ ಲಕ್ಷಣ ಹೊಂದಿರುವವರೂ ಪರೀಕ್ಷೆಗೆ ಒಳಗಾಗಬೇಕು ಹಾಗೂ ತಡ ಮಾಡದಂತೆ ಚಿಕಿತ್ಸೆ ಪಡೆಯಬೇಕು. ಅಗತ್ಯವಾದಲ್ಲಿ ಆಸ್ಪತ್ರೆಗೆ ದಾಖಲಾಗಬೇಕು ಎಂದು ಸಲಹೆ ನೀಡಿದೆ ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ.

ಈ ನಡುವೆ, ಎರಡನೇ ಅಲೆಯಲ್ಲಿ ಕೊರೊನಾ ಆರ್‌ಟಿ - ಪಿಸಿಆರ್ ಪರೀಕ್ಷೆಯಿಂದ ನುಸುಳಿಕೊಳ್ಳುವ ಸಾಧ್ಯತೆಯೂ ಕಂಡು ಬರುತ್ತಿದೆ. ಕೊರೊನಾ ಸೋಂಕು ಶ್ವಾಸಕೋಶ ಮತ್ತಿತರೆ ಅಂಗಗಳಿಗೆ ತಲುಪಿದ್ದರೂ ಸಹ ಪರೀಕ್ಷೆಯಲ್ಲಿ ನೆಗೆಟಿವ್ ಬರುವ ಪ್ರಕರಣಗಳು ಕಂಡು ಬರುತ್ತಿವೆ!

ಮೊದಲ ಅಲೆಗೆ ಹೋಲಿಸಿದರೆ, ಎರಡನೇ ಅಲೆಯಲ್ಲಿ ಸೋಂಕಿದ್ದರೂ ನೆಗೆಟಿವ್ ಬರುವ ಪ್ರಕರಣಗಳು ಹೆಚ್ಚಾಗುತ್ತಿವೆ. ಶ್ವಾಸಕೋಶದ ಸ್ಕ್ಯಾನ್ ಮಾಡಿದಾಗ ಕೊರೊನಾ ಸೋಂಕಿನಿಂದ ಹಾನಿಯಾಗಿರುವುದು ಕಂಡು ಬರುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರ್‌ಟಿ - ಪಿಸಿಆರ್ ಪರೀಕ್ಷೆಗಾಗಿ ಗಂಟಲು ದ್ರವ ಪಡೆಯಲಾಗುತ್ತದೆ. ಗಂಟಲು ಭಾಗದಲ್ಲಿ ವೈರಾಣು ಇದ್ದರೆ ಪಾಸಿಟಿವ್ ಬರುತ್ತದೆ. ಒಂದು ವೇಳೆ ಗಂಟಲಲ್ಲಿ ವೈರಾಣು ಇರದೇ, ದೇಹದ ಬೇರೆ ಭಾಗಗಳಲ್ಲಿ ಹರಡಿದ್ದರೆ ನೆಗೆಟಿವ್ ಬರುತ್ತದೆ ಎಂದು ವೈದ್ಯಕೀಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕೊರೊನಾ ನೆಗೆಟಿವ್ ಬಂದರೂ, ಸೋಂಕು ಹರಡಿರುವ ಪ್ರಕರಣಗಳು ಈಗ ದಿನಕ್ಕೆ 10-15 ಕಂಡು ಬರುತ್ತಿವೆ. ಇಂತಹ ಪ್ರಕರಣಗಳಲ್ಲಿ ಸರ್ಕಾರದ ಮಾರ್ಗಸೂಚಿಯ ಪ್ರಕಾರ, ಕೊರೊನಾ ರೀತಿಯ ಸೋಂಕು ಎಂದು ಪರಿಗಣಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಕೊರೊನಾ ಸೋಂಕಿತರಿಗೆ ನೀಡುವ ಚಿಕಿತ್ಸೆಯನ್ನೇ ಇವರಿಗೂ ನೀಡಲಾಗುತ್ತಿದೆ. ಆದರೆ, ಇವರ ಲೆಕ್ಕ ಕೊರೊನಾ ಸೋಂಕಿತರ ಪಟ್ಟಿಗೆ ಸೇರ್ಪಡೆಯಾಗುವುದಿಲ್ಲ. ಹೀಗಾಗಿ ಕೊರೊನಾ ನೆಗೆಟಿವ್ ಬಂದರೂ, ಜನರು ಸೋಂಕು ಲಕ್ಷಣಗಳಿದ್ದರೆ ಎಚ್ಚರಿಕೆ ವಹಿಸುವ ಅಗತ್ಯವಿದೆ ಎಂದು ಅಧಿಕಾರಿ ವಿವರಿಸಿದ್ದಾರೆ.

ಎರಡನೇ ಅಲೆ ಅತ್ಯಂತ ವೇಗವಾಗಿ ಹರಡುತ್ತಿದೆ. ಮೊದಲ ಅಲೆಯಲ್ಲಿ ಸೋಂಕು ನಿಧಾನವಾಗಿ ಹರಡುತ್ತಿತ್ತು. ಆದರೆ, ಎರಡನೇ ಅಲೆಯಲ್ಲಿ ಕೊರೊನಾ ವೇಗವಾಗಿ ಹರಡುತ್ತಿದೆ. ಹೀಗಾಗಿ ಸೋಂಕು ನಗರದ ಒಂದು ಭಾಗದಲ್ಲಿ ಕೇಂದ್ರೀಕೃತವಾಗದೇ, ಎಲ್ಲೆಡೆ ಹರಡಿದೆ ಎಂದು ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ. ಜಿ.ಡಿ. ರಾಘವನ್ ಹೇಳಿದ್ದಾರೆ.

ಸೋಂಕು ವೇಗವಾಗಿ ಹರಡುತ್ತಿರುವ ಕಾರಣ, ಒಬ್ಬ ಸೋಂಕಿತರ ಸಂಪರ್ಕಿತರನ್ನು ತಪಾಸಣೆಗೆ ಒಳಪಡಿಸಿದಾಗ ನಾಲ್ಕೈದು ಸೋಂಕಿತರು ಸಿಗುತ್ತಿದ್ದಾರೆ ಎಂದೂ ಅವರು ತಿಳಿಸಿದ್ದಾರೆ. ಒಟ್ಟಾರೆ ಎರಡು ಅಲೆಯ ನಡುವೆ ಕೊರೊನಾ ಹೊಸ ರೂಪ ಪಡೆದುಕೊಂಡಿದೆ. ಜನರು ಹಾಗೂ ಆರೋಗ್ಯ ವಲಯ ಬದಲಾವಣೆಗೆ ತಕ್ಕಂತೆ ಸ್ಪಂದಿಸುವ ಅಗತ್ಯ ಕಂಡು ಬರುತ್ತಿದೆ.

# ನಿಗದಿತ ಸಮಯಕ್ಕೆ ವ್ಯಾಪಾರ, ವಹಿವಾಟು ಸ್ಥಗಿತ




ಹರಿಹರ, ಏ.28- ಕೊರೊನಾ ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಅಗತ್ಯ ವಸ್ತುಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಅಂಗಡಿ ಮುಂಗಟ್ಟುಗಳನ್ನು ಬೆಳಗ್ಗೆ 10 ಗಂಟೆಯಿಂದ ಸ್ಥಗಿತಗೊಳಿಸುವಂತೆ ಆದೇಶವನ್ನು ನೀಡಿದ್ದರಿಂದ ನಗರದ ಎಲ್ಲಾ ವ್ಯಾಪಾರ, ವಹಿವಾಟುಗಳನ್ನು 10 ಗಂಟೆಗೆ ಸ್ಥಗಿತಗೊಳಿಸಲಾಯಿತು.

ವಾಹನಗಳ ಸಂಚಾರ ಇರಲಿಲ್ಲ. ಮುಖ್ಯ ರಸ್ತೆ, ದೇವಸ್ಥಾನ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ತರಕಾರಿ ಮಾರುಕಟ್ಟೆ, ಹೆಚ್. ಶಿವಪ್ಪ ವೃತ್ತ, ಹಳೆ ಪಿಬಿ ರಸ್ತೆ, ಹರಪನಹಳ್ಳಿ ರಸ್ತೆ, ಹೈಸ್ಕೂಲ್ ಬಡಾವಣೆ, ಬಸ್ ನಿಲ್ದಾಣ ಸೇರಿದಂತೆ ವಿವಿಧೆಡೆಯಲ್ಲಿ ಜನ ಸಂದಣಿ ಇಲ್ಲದೆ ರಸ್ತೆಗಳು ಬಿಕೋ ಎನ್ನುತ್ತಿದ್ದವು. ಬ್ಯಾಂಕ್ ವ್ಯವಹಾರ ಮಧ್ಯಾಹ್ನ 2 ರವರೆಗೆ ನಡೆದರೆ, ಸರ್ಕಾರಿ ಕಾರ್ಯಾಲಯಗಳು ಎಂದಿನಂತೆ ಕಾರ್ಯ ನಿರ್ವಹಿಸಿದವು. ಔಷಧಿ, ಪೆಟ್ರೋಲ್ ಬಂಕ್, ಆಸ್ಪತ್ರೆಗಳು ಕಾರ್ಯನಿರ್ವಹಿಸಿದವು.

ನಗರದಲ್ಲಿ ಕೊರೊನಾ ಹರಡದಂತೆ ತಡೆಗಟ್ಟಲು ನಗರಸಭೆ ಸಭಾಂಗಣದಲ್ಲಿ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಪೌರಾಯುಕ್ತೆ ಎಸ್. ಲಕ್ಷ್ಮೀ, ಆರೋಗ್ಯಾಧಿಕಾರಿ ಡಾ. ಚಂದ್ರಮೋಹನ್, ಸಿಪಿಐ ಸತೀಶ್ ಕುಮಾರ್ ಇವರು ತರಕಾರಿ ಮತ್ತು ಹಣ್ಣಿನ ವ್ಯಾಪಾರಿಗಳ ಸಭೆ ಮಾಡಿದರು. ಸಭೆಯಲ್ಲಿ ಹಣ್ಣು ಮತ್ತು ತರಕಾರಿ ವ್ಯಾಪಾರಿಗಳು ತಮಗೆ ವ್ಯಾಪಾರ ಮಾಡುವುದಕ್ಕೆ ಹೆಚ್ಚಿನ ಸಮಯ ನೀಡಿ ಎಂದು ಮನವಿ ಮಾಡಿಕೊಂಡರು. ಅದಕ್ಕೆ ಅಧಿಕಾರಿಗಳು ಇದು ಸರ್ಕಾರದ ಆದೇಶವಾಗಿದ್ದು, ಬದಲಿಸಲು ಸಾಧ್ಯವಿಲ್ಲ ಎಂದರು.

ನಗರದಲ್ಲಿ ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡಿ ಓಡಾಡುವ ಸಾರ್ವಜನಿಕರಿಗೆ ಮತ್ತು ವಾಹನ ಸವಾರರಿಗೆ ನಗರ ಠಾಣೆಯ ಪಿಎಸ್‌ಐ ಸುನಿಲ್ ಬಸವರಾಜ್ ತೆಲಿ ದಂಡವನ್ನು ವಿಧಿಸಿ, ಎಚ್ಚರಿಕೆ ನೀಡಿದರು.

# ನಿರ್ಬಂಧ ರೈತರು-ಕೈಗಾರಿಕೆಗಳಿಗೆ ತೊಂದರೆಯಾಗದಿರಲಿ: ಸಚಿವ ಭೈರತಿ



ದಾವಣಗೆರೆ, ಏ. 28 - ರೈತರು, ಕೈಗಾರಿಕೆಗಳು ಹಾಗೂ ಕಟ್ಟಡ ನಿರ್ಮಾಣದಂತಹ ಚಟುವಟಿಕೆಗಳಿಗೆ ತೊಂದರೆಯಾಗದ ರೀತಿಯಲ್ಲಿ ರಾಜ್ಯ ಸರ್ಕಾರ ವಿಧಿಸಿರುವ ಕೊರೊನಾ ನಿರ್ಬಂಧಗಳನ್ನು ಜಾರಿಗೆ ತರುವಂತೆ ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಜಿಲ್ಲಾಡಳಿತಕ್ಕೆ ಸೂಚನೆ ನೀಡಿದ್ದಾರೆ.

ವಿಡಿಯೋ ಕಾನ್ಫರೆನ್ಸ್ ಮೂಲಕ ಜಿಲ್ಲಾಡಳಿತ ಹಾಗೂ ತಾಲ್ಲೂಕು ಆಡಳಿತದ ಜೊತೆ ಸಭೆ ನಡೆಸಿದ ಅವರು, ಸರ್ಕಾರದ ಮಾರ್ಗಸೂಚಿಗಳನ್ನು ಜಿಲ್ಲೆಯಲ್ಲಿ ಕಟ್ಟುನಿಟ್ಟಾಗಿ ಹಾಗೂ ಮುಲಾಜಿಲ್ಲದೇ ಕ್ರಮ ತೆಗೆದುಕೊಳ್ಳಬೇಕು. ಯಾವುದೇ ಕಾರಣಕ್ಕೂ ಮೈ ಮರೆಯಬಾರದು ಎಂದು ಹೇಳಿದರು.

ದಾವಣಗೆರೆ, ಹೊನ್ನಾಳಿ, ಚನ್ನಗಿರಿ, ಹರಿಹರ, ಜಗಳೂರು ತಾಲ್ಲೂಕುಗಳ ತಹಶೀಲ್ದಾರರೊಂದಿಗೆ ಸಚಿವರು ಮಾತನಾಡಿ, ರೈತರ ಚಟುವಟಿಕೆ ಮತ್ತು ಕೈಗಾರಿಕೆ ಚಟುವಟಿಕೆ ಹಾಗು ಇತರೆ ಕಟ್ಟಡ ಕಾಮಗಾರಿಗಳಿಗೆ ತೊಂದರೆ ಆಗದಂತೆ ಕ್ರಮ ಕೈಗೊಳ್ಳಬೇಕು. ಜೊತೆಗೆ ತಾಲ್ಲೂಕು ಟಾಸ್ಕ್‌ಫೋರ್ಸ್, ಗ್ರಾ.ಪಂ ಹಾಗೂ ಬೂತ್ ಮಟ್ಟದಲ್ಲಿ ಟಾಸ್ಕ್‌ಫೋರ್ಸ್ ಸಮಿತಿಗಳು ಸಕ್ರಿಯವಾಗಿ ಕೋವಿಡ್ ನಿರ್ವಹಣೆಯಲ್ಲಿ ಪಾಲ್ಗೊಳ್ಳಬೇಕು. ಪಿಡಿಓ, ಆಶಾ, ಅಂಗನವಾಡಿ ಸೇರಿದಂತೆ, ಹಿಂದೆ ಸಕ್ರಿಯವಾಗಿದ್ದ ಎಲ್ಲ ಸಿಬ್ಬಂದಿಗಳನ್ನೊಳಗೊಂಡು ಕಾರ್ಯ ನಿರ್ವಹಿಸಬೇಕೆಂದು ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಪ್ರತಿದಿನ 20 ಸಾವಿರ ಲಸಿಕೆಯ ಅಗತ್ಯವಿದೆ ಹಾಗೂ ರೆಮ್ಡಿಸಿವಿರ್ ಮತ್ತಿತರೆ ಔಷಧಗಳನ್ನು ಪೂರೈಸಬೇಕಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಈ ಸಂದರ್ಭದಲ್ಲಿ ಮನವಿ ಮಾಡಿಕೊಂಡರು.

### ರೋಗಿಗಳಿಗೆ ಬೆಡ್ ಸಿಗದಿದ್ದರೆ ಡಿಸಿ-ಎಸ್ಪಿ ಹೊಣೆ

ಜಿಲ್ಲೆಗೆ ಅಗತ್ಯವಾಗಿರುವ ಔಷಧ ಹಾಗೂ ಲಸಿಕೆಗಳ ಪೂರೈಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಹಾಗೂ ಆರೋಗ್ಯ ಸಚಿವರ ಜೊತೆ ಮಾತನಾಡುವುದಾಗಿ ಭೈರತಿ ತಿಳಿಸಿದರು.

ಜಿಲ್ಲೆಗೆ ಬಂದವರಿಗೆ ಕೊರೊನಾ ಲಕ್ಷಣವಿದ್ದಲ್ಲಿ ತಕ್ಷಣ ಪರೀಕ್ಷೆ ಮಾಡಿ, ಫಲಿತಾಂಶ ಬರುವವರೆಗೆ ಅವರನ್ನು ಹೋಂ ಕ್ವಾರಂಟೈನ್‌ನಲ್ಲಿ ಇರಿಸಬೇಕು. ಇದಕ್ಕಾಗಿ ಹೆಚ್ಚುವರಿಯಾಗಿ ಗೃಹ ರಕ್ಷಕ ದಳದ ಸಿಬ್ಬಂದಿ ಬಳಸಿಕೊಳ್ಳಬೇಕು. ಎಲ್ಲಾ ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಆಂಬ್ಯುಲೆನ್ಸ್ ಇರುವಂತೆ ನೋಡಿಕೊಳ್ಳಬೇಕು ಎಂದವರು ಹೇಳಿದರು.

ಕೋವಿಡ್ ಹಾಗೂ ಕೋವಿಡೇತರ ರೋಗಿಗಳಿಗೆ ಬೆಡ್ ನಿರಾಕರಿಸಬಾರದು. ಹಾಗೇನಾದರೂ ಬೆಡ್ ನಿರಾಕರಣೆಯಾದರೆ ಅದಕ್ಕೆ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳೇ ಕಾರಣರಾಗಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಎಚ್ಚರಿಸಿದರು. ಇತ್ತೀಚೆಗೆ ಕೊರೊನಾದಿಂದ ನಾಲ್ವರು ಮೃತಪಟ್ಟಿದ್ದು ತಮ್ಮ ಮನಸಿಗೆ ನೋವು ತಂದಿದೆ. ಸಂದಿಗ್ಧ ಪರಿಸ್ಥಿತಿಯಲ್ಲಿ ಎಚ್ಚರಿಕೆಯಿಂದ ಕ್ರಮ ತೆಗೆದುಕೊಳ್ಳಬೇಕು ಎಂದೂ ಅವರು ಹೇಳಿದರು.

ಕೊರೊನಾ ನಿಯಂತ್ರಣ ಕ್ರಮಗಳಿಗಾಗಿ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರನ್ನು ಕಳೆದ ಬಾರಿಯಂತೆ ಬಳಸಿಕೊಳ್ಳಬೇಕು. ಬೂತ್ ಮಟ್ಟದ ಸಮಿತಿಗಳನ್ನು ರಚಿಸಬೇಕು. ಇದು ತಾಲ್ಲೂಕು ನೋಡಲ್ ಅಧಿಕಾರಿಗಳಾದ ತಹಶೀಲ್ದಾರರ ಜವಾಬ್ದಾರಿ ಎಂದು ಸಚಿವರು ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಬೀಳಗಿ, ಪ್ರಸ್ತುತ ದಿನಕ್ಕೆ 13 ಸಾವಿರ ಜನರಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿದೆ. ಮುಂದಿನ ದಿನಗಳಲ್ಲಿ 20 ಸಾವಿರದವರೆಗೆ ಲಸಿಕೆ ನೀಡಲು ಅಗತ್ಯವಾದ ಲಸಿಕೆಗಳ ಸರಬರಾಜು ಮಾಡಬೇಕೆಂದು ಕೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಮಾತನಾಡಿ, ಕಳೆದ ಒಂದು ವಾರದಲ್ಲಿ 2335 ಮಾಸ್ಕ್ ಪ್ರಕರಣ. ಲಾಕ್‌ಡೌನ್ ಉಲ್ಲಂಘನೆಯ 15 ಪ್ರಕರಣಗಳನ್ನು ಎಪಿಡೆಮಿಕ್ ಕಾಯ್ದೆ ಅಡಿ ದಾಖಲಿಸಲಾಗಿದೆ. ಇದರಲ್ಲಿ ರೆಮಿಡಿಸಿವಿರ್ ಅಕ್ರಮ ಸಂಗ್ರಹ ಮತ್ತು ಮಾರಾಟದ ಕುರಿತು 2 ಪ್ರಕರಣಗಳನ್ನು ದಾಖಲಾಗಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಡಿಹೆಚ್‌ಓ ಡಾ.ನಾಗರಾಜ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ರಾಘವನ್, ಜಿಲ್ಲಾಸ್ಪತ್ರೆಯ ಶಸ್ತ್ರಚಿಕಿತ್ಸಕ ಡಾ. ಜಯಪ್ರಕಾಶ್ ಹಾಗೂ ತಾಲ್ಲೂಕುಗಳ ತಹಶೀಲ್ದಾರರು ಸಚಿವರಿಗೆ ಕೋವಿಡ್ ಕ್ರಮಗಳ ಕುರಿತು ವಿವರ ನೀಡಿದರು.

ಸಭೆಯಲ್ಲಿ ಎಡಿಸಿ ಪೂಜಾರ ವೀರಮಲ್ಲಪ್ಪ, ಎಸಿ ಮಮತಾ ಹೊಸಗೌಡರ್, ನಗರಾಭಿವೃದ್ದಿ ಕೋಶದ ಯೋಜನಾ ನಿರ್ದೇಶಕಿ ನಜ್ಮಾ, ಎಸ್‌ಎಲ್‌ಓಗಳಾದ ರೇಷ್ಮಾ ಹಾನಗಲ್, ಸರೋಜ, ತಹಶೀಲ್ದಾರ್ ಗಿರೀಶ್, ಆರ್‌ಸಿಹೆಚ್‌ಓ ಡಾ.ಮೀನಾಕ್ಷಿ, ಡಾ. ನಟರಾಜ್, ಡಾ.ಗಂಗಾಧರ್, ಡಾ.ರೇಣುಕಾರಾಧ್ಯ, ಡಾ.ಯತೀಶ್, ಟಿಹೆಚ್‌ಓ ಡಾ. ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.

## 15ನೇ ವಾರ್ಡ್‌ನಲ್ಲಿ ಕೋವಿಡ್ ಲಸಿಕೆ



ದಾವಣಗೆರೆ, ಏ.28 - ಕೊರೊನಾ ಹೋಗಲಾಡಿಸಲು, ಕೋವಿಡ್ ಶೀಲ್ಡ್ ಲಸಿಕೆ ಹಾಕಿಸುವ ಶಿಬಿರವನ್ನು ವಿನೋಬನಗರ ಸೆಂಟ್ ಮೇರಿಸ್ ಸ್ಕೂಲ್ ನಲ್ಲಿ ನಡೆಸಲಾಯಿತು. ಇದೇ ಸಂದರ್ಭದಲ್ಲಿ 15ನೇ ವಾರ್ಡ್‌ನ ನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಆಶಾ ಅವರ ಪತಿ ಉಮೇಶ್ ಅವರು ಲಸಿಕೆ ಹಾಕಿಸಿ ಕೊಂಡರು. 15ನೇ ವಾರ್ಡ್‌ನ ಪಾಲಿಕೆ ಸದಸ್ಯರಾದ ಶ್ರೀಮತಿ ಆಶಾ ಉಮೇಶ್, ಪಾಲಿಕೆ ವಿರೋಧ ಪಕ್ಷದ ನಾಯಕ ಎ. ನಾಗರಾಜ್, ಅಂಗಡಿ ಶಂಭಣ್ಣ, ವಿನಾಯಕ, ರವಿ, ಪಿಸಾಳೆ ರಘು, ಡಾ. ಹೊನ್ನಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಅನೈತಿಕ ಸಂಬಂಧವಿದ್ದ ಮಹಿಳೆಯ ಕೊಲೆ : ಆರೋಪಿ ಬಂಧನ

ದಾವಣಗೆರೆ, ಏ.28- ಅನೈತಿಕ ಸಂಬಂಧ ಹೊಂದಿದ್ದ ಮಹಿಳೆಯ ಶೀಲವನ್ನು ಶಂಕಿಸಿ ಕೊಲೆಗೈದ ಆರೋಪಿತನನ್ನು ಚನ್ನಗಿರಿ ಪೊಲೀಸರು ಬಂಧಿಸಿದ್ದಾರೆ. ಚನ್ನಗಿರಿ ತಾಲ್ಲೂಕು ಮಾವಿನಕಟ್ಟೆ ಗ್ರಾಮದ ಗಾರೆ ಕೆಲಸಗಾರ ವೆಂಕಟೇಶ್ ಬಂಧಿತನು. ಹೊನ್ನಾಳಿ ತಾಲ್ಲೂಕು ನೀಲಾಪುರ ಗ್ರಾಮದ ವಸಂತಬಾಯಿ (30) ಹತ್ಯೆಯಾದ ಪ್ರೇಯಸಿ.

ಚನ್ನಗಿರಿ ತಾಲ್ಲೂಕು ಅಜ್ಜಿಹಳ್ಳಿ ಗ್ರಾಮದ ನಾಗರಾಜ ಎಂಬಾತ ತನ್ನ ತೋಟಕ್ಕೆ ಬಂದಾಗ ತೋಟದಿಂದ ಸುಮಾರು 100 ಅಡಿಯಲ್ಲಿ ವಸಂತಬಾಯಿ ಶವ ಪತ್ತೆಯಾಗಿದೆ. ಈ ಸಂಬಂಧ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಪ್ರಕರಣದ ಆರೋಪಿ ಪತ್ತೆಗೆ ಎಸ್ಪಿ ಹನುಮಂತರಾಯ ಮತ್ತು ಎಎಸ್ಪಿ ಎಂ. ರಾಜೀವ್, ಚನ್ನಗಿರಿ ಉಪವಿಭಾಗದ ಉಪಾಧೀಕ್ಷಕ ಕೆ.ಎಂ. ಸಂತೋಷ್ ಮಾರ್ಗದರ್ಶನದಲ್ಲಿ ಚನ್ನಗಿರಿ ಸಿಪಿಐ ಪಿ.ಬಿ. ಮಧು ನೇತೃತ್ವದಲ್ಲಿ ಚನ್ನಗಿರಿ ಪಿಎಸ್ ಐಗಳಾದ ಜಗದೀಶ್ ಮತ್ತು ರೂಪ್ಲಿಬಾಯಿ ಮತ್ತು ಸಿಬ್ಬಂದಿಗಳಾದ ರುದ್ರೇಶ್, ಮೊಹಮ್ಮದ್ ಖಾನ್, ಅರುಣ್ ಕುಮಾರ್, ಶ್ರೀನಿವಾಸಮೂರ್ತಿ, ಪರಶುರಾಮ್, ರೇವಣಸಿದ್ದಪ್ಪ ಒಳಗೊಂಡ ತಂಡ ಇಂದು ಆರೋಪಿ ವೆಂಕಟೇಶ್ ನನ್ನು ಬಂಧಿಸಿದ್ದಾರೆ.

## ಸಂಶೋಧನಾ ಸ್ಥಾನಗಳಿಗೆ ಅರ್ಜಿ ಅವಧಿ ವಿಸ್ತರಣೆ

ದಾವಣಗೆರೆ, ಏ.28- ದಾವಣಗೆರೆ ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಈ ಸಾಲಿನಲ್ಲಿ ಲಭ್ಯವಿರುವ ಪಿಹೆಚ್‌ಡಿ/ಪಿಡಿಎಫ್/ಡಿಎಸ್ಸಿ/ಡಿಲಿಟ್ ಸಂಶೋಧನಾ ಸ್ಥಾನಗಳಿಗೆ ಅರ್ಜಿಗಳನ್ನು ಆಹ್ವಾನಿಸಿದ್ದು, ಕೋವಿಡ್ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಏಪ್ರಿಲ್ 27 ರಿಂದ ಮೇ 21 ರವರೆಗೆ ಲಾಕ್‌ಡೌನ್‌ಗೆ ಆದೇಶ ನೀಡಿರುವುದರಿಂದ ಹಾಗೂ ಕುಲಪತಿಗಳ ಅನುಮೋದನೆ ಮೇರೆಗೆ ಅರ್ಜಿ ಸಲ್ಲಿಕೆ ಅವಧಿಯನ್ನು ಮೇ 12 ರವರೆಗೆ ವಿಸ್ತರಿಸಲಾಗಿದೆ.

ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ವಿವಿಯ ವೆಬ್‌ಸೈಟ್ ಅನ್ನು ಸಂಪರ್ಕಿಸಲು ದಾವಣಗೆರೆ ವಿವಿ ಕುಲಸಚಿವರು ತಿಳಿಸಿದ್ದಾರೆ.

## ಛಾಯಾಗ್ರಾಹಕರ ಅಕಾಡೆಮಿ ಸ್ಥಾಪಿಸಿ

ದಾವಣಗೆರೆ, ಏ.28- ಛಾಯಾಗ್ರಾಹಕರ ಅಕಾಡೆಮಿ ಸ್ಥಾಪಿಸುವ ಮೂಲಕ ನೆರವಿನ ಹಸ್ತ ಚಾಚಬೇಕು ಹಾಗೂ ಛಾಯಾಗ್ರಾಹಕ ವೃತ್ತಿ ಬಾಂಧವರಿಗೆ ಧನ ಸಹಾಯ ಒದಗಿಸುವಂತೆ ದಾವಣಗೆರೆ ಫೋಟೋಗ್ರಾಫರ್ ಅಸೋಸಿ ಯೇಷನ್ ಸಂಘಟನಾ ಕಾರ್ಯ ದರ್ಶಿ ಎಂ. ಮನು ಆಗ್ರಹಿಸಿದ್ದಾರೆ.

## ಲಸಿಕೆ : ಶೇ.25ರಷ್ಟು ಜನರಲ್ಲಿ ಅಲ್ಪಾವಧಿ ಅಡ್ಡ ಪರಿಣಾಮ

ನವದೆಹಲಿ, ಏ. 28 - ಫೈಜರ್ ಹಾಗೂ ಕೋವಿಶೀಲ್ಡ್ ಲಸಿಕೆ ಪಡೆಯುವ ಶೇ.25ರಷ್ಟು ಜನರಲ್ಲಿ ಸಣ್ಣ ಹಾಗೂ ಅಲ್ಪಾವಧಿಯ ಅಡ್ಡ ಪರಿಣಾಮಗಳು ಕಂಡು ಬಂದಿವೆ ಎಂದು ಲ್ಯಾನ್ಸೆಟ್ ಇನ್ಫೆಕ್ಷಿಯಸ್ ಡಿಸೀಸಸ್ ನಿಯತಕಾಲಿಕದಲ್ಲಿ ತಿಳಿಸಲಾಗಿದೆ.

ಬ್ರಿಟನ್‌ನ ಕಿಂಗ್ಸ್ ಕಾಲೇಜ್ ಲಂಡನ್‌ನ ಸಂಶೋಧಕರು ಲಸಿಕೆಗಳ ಅಡ್ಡ ಪರಿಣಾಮಗಳ ಅಧ್ಯಯನ ನಡೆಸಿದ್ದಾರೆ. ಲಸಿಕೆ ಪಡೆದ 24 ಗಂಟೆಗಳಲ್ಲಿ ಅಡ್ಡ ಪರಿಣಾಮ ತೀವ್ರವಾಗಿ, ನಂತರದ 1-2 ದಿನ ಇರುತ್ತದೆ ಎಂದು ಅಧ್ಯಯನ ಹೇಳಿದೆ. ತಲೆ ನೋವು ಹಾಗೂ ಬಳಲಿಕೆಗಳು ಸಾಮಾನ್ಯ ಅಡ್ಡ ಪರಿಣಾಮಗಳಾಗಿವೆ. ಜೋ ಕೋವಿಡ್ ಸಿಂಪ್ಟಮ್ ಸ್ಟಡಿ ಆಪ್‌ನಿಂದ ಪಡೆಯಲಾದ 6.27 ಲಕ್ಷ ಬಳಕೆದಾರರ ಮಾಹಿತಿ ಅಧ್ಯಯನ ಮಾಡಿ ಈ ವರದಿ ರೂಪಿಸಲಾಗಿದೆ.

55 ವರ್ಷದೊಳಗಿನವರಲ್ಲಿ ಹಾಗೂ ಮಹಿಳೆಯರಲ್ಲಿ ಅಡ್ಡ ಪರಿಣಾಮ ಗಳು ಸಾಮಾನ್ಯವಾಗಿವೆ ಎಂಬುದು ಅಧ್ಯಯನದಿಂದ ತಿಳಿದು ಬಂದಿದೆ. ಫೈಜರ್ ಹಾಗೂ ಅಸ್ಟ್ರಾಜೆನೆಕಾ ಲಸಿಕೆಗಳ ಪ್ರಯೋಗ ನಡೆಸುವುದಕ್ಕಿಂತ, ಸಾರ್ವಜನಿಕರಿಗೆ ಲಸಿಕೆ ನೀಡಿದ ಸಂದರ್ಭದಲ್ಲಿ ಅಡ್ಡ ಪರಿಣಾಮಗಳು ಕಡಿಮೆಯಾಗಿವೆ. ಇದರಿಂದಾಗಿ ಈ ಲಸಿಕೆಗಳ ಕುರಿತು ಜನರಲ್ಲಿ ಇರುವ ಕಳವಳಗಳು ನಿವಾರಣೆಯಾಗಲಿವೆ ಎಂದು ವರದಿಯಲ್ಲಿ ಹೇಳಲಾಗಿದೆ.

## ಕೋವಿಡ್ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ



ದಾವಣಗೆರೆ, ಏ.28- ಸರ್ಕಾರದ ಕೋವಿಡ್ ಮಾರ್ಗ ಸೂಚಿಗಳನ್ನು ಕಡ್ಡಾಯ ವಾಗಿ ಪಾಲನೆ ಮಾಡು ವಂತೆ ಸಂಸದ ಜಿ.ಎಂ.ಸಿದ್ದೇಶ್ವರ ಜನತೆ ಯಲ್ಲಿ ಮನವಿ ಮಾಡಿದ್ದಾರೆ. ಅನಾವಶ್ಯಕ ವಾಗಿ ಅಲೆ ದಾಡದೇ ಮನೆಯಲ್ಲೇ ಇರಬೇಕು. ಕಡ್ಡಾ ಯವಾಗಿ ಮಾಸ್ಕ್ ಧರಿಸಬೇಕು. ಸ್ಯಾನಿಟೈಸರ್, ಸಾಮಾಜಿಕ ಅಂತರ ಕಾಯ್ದು ಕೊಳ್ಳುವುದು ಕಡ್ಡಾಯವಾಗಬೇಕು ಎಂದಿದ್ದಾರೆ. ಗ್ರಾಮಗಳಲ್ಲಿ ಹಬ್ಬ, ರಥೋತ್ಸವ, ಜಾತ್ರೆಗಳ ಆಚರಣೆಗಳು ಕಂಡು ಬಂದರೆ, ಆಯಾ ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿಯವರ ವಿರುದ್ಧ ಕ್ರಮ ಜರುಗಿಸುವುದಾಗಿ ಸರ್ಕಾರ ತಿಳಿಸಿದೆ. ಆದ್ದರಿಂದ ಗ್ರಾಮಸ್ಥರು ಯಾವುದೇ ಆಚರಣೆಗೆ ಮುಂದಾಗಬಾರದು ಎಂದು ವಿನಂತಿಸಿದ್ದಾರೆ.

## ಅರ್ಚಕರಿಗೆ ಆಹಾರ ಧಾನ್ಯಗಳ ಕಿಟ್ ವಿತರಣೆ



ದಾವಣಗೆರೆ, ಏ.28- ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಅರ್ಚಕರಿಗೆ ಜೀವನ ನಡೆಸಲು ಬಹಳ ತೊಂದರೆಯಾದ ಹಿನ್ನಲೆಯಲ್ಲಿ ಅವರಿಗೆ ದಿನನಿತ್ಯ ಬಳಕೆಯ ಆಹಾರ ಧಾನ್ಯಗಳ ಕಿಟ್‌ಗಳನ್ನು ವಿತರಿಸಲಾಗುತ್ತಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ದೇವರಮನಿ ಶಿವಕುಮಾರ್ ತಿಳಿಸಿದರು.

ನಗರದ ರೇಣುಕಾ ಮಂದಿರದ ಆವರಣದಲ್ಲಿ ಇಂದು ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಘಟಕದಿಂದ ಹಮ್ಮಿಕೊಂಡಿದ್ದ ಅರ್ಚಕರಿಗೆ ಆಹಾರ ಧಾನ್ಯಗಳ ಕಿಟ್ ವಿತರಿಸಿ ಮಾತನಾಡಿದರು.

ದೇಶದಾದ್ಯಂತ ದಿನ ದಿನಕ್ಕೆ ಕೊರೊನಾ 2ನೇ ಅಲೆ ಪ್ರಕರಣಗಳು ಬಹಳ ಜಾಸ್ತಿಯಾಗುತ್ತಿದ್ದು ಕೊರೊನಾ ಕರ್ಫ್ಯೂ, ಲಾಕ್‌ಡೌನ್ ಹಿನ್ನೆಲೆಯಲ್ಲಿ ದೇವಸ್ಥಾನಗಳೆಲ್ಲಾ ಬಂದ್ ಆಗಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ದಿನ ನಗರದ ವಿವಿಧ ದೇವಸ್ಥಾನಗಳ 60 ಜನ ಅರ್ಚಕರಿಗೆ ಕಿಟ್ ವಿತರಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಮಹಾಸಭೆಯಲ್ಲಿ ಚರ್ಚಿಸಿ ಬಡವರಿಗೆ, ಸಂಕಷ್ಟದಲ್ಲಿರುವವರಿಗೆ ಕಿಟ್ ವಿತರಿಸಲಾಗುವುದು ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಮಹಾಸಭಾ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಕರೇಶಿವಪ್ಪರ ಸಿದ್ದೇಶ, ದೇವರಮನಿ ಶಿವರಾಜ, ಪಾಲಿಕೆ ಸದಸ್ಯ ಶಿವನಗೌಡ ಪಾಟೀಲ್, ಜಯಪ್ರಕಾಶ ಮಾಗಿ, ಶ್ರೀಕಾಂತ್ ನೀಲಗುಂದ, ಇಟ್ಟಿಗುಡಿ ಮಹಾದೇವಪ್ಪ, ರುದ್ರೇಶ, ಅಭಿಷೇಕ ಪಿ. ಎಳೆಹೊಳೆ ದೇವೇಂದ್ರಪ್ಪ, ಶಿವಾನಂದ ಬೆನ್ನೂರು ಇತರರು ಇದ್ದರು.

## ಹರಿಹರ ನಗರಸಭೆ ಅಧ್ಯಕ್ಷರಾಗಿ ಡಿ.ಯು. ರತ್ನ


**(4ನೇ ಪುಟದಿಂದ)** 28/10/2020 ರಂದು ನೀಡಿರುವ ಆದೇಶದನ್ವಯ 5 ನಗರಸಭೆಗಳಿಗೆ ಸಂಬಂಧಿಸಿದಂತೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ನವೆಂಬರ್ 2 ರೊಳಗೆ ಚುನಾವಣೆ ನಡೆಸಿ ಚುನಾವಣಾ ಫಲಿತಾಂಶವನ್ನು ಮುಂದಿನ ಆದೇಶದವರಿಗೆ ಪ್ರಕಟಿಸದಿರಲು ನಿರ್ದೇಶಿಸಲಾಗಿತ್ತು.

ಸರ್ಕಾರದ ಅಧಿಸೂಚನೆ ಯುಡಿಡಿ107 ಎಮ್‌ಸಿಎಲ್‌ಆರ್ 2020 (1) ದಿ. 8/10/2020 ಅದರಂತೆ ನಗರಸಭೆ ಅಧ್ಯಕ್ಷ ಸ್ಥಾನವು ಸಾಮಾನ್ಯ ಮಹಿಳೆ ಮತ್ತು ಉಪಾಧ್ಯಕ್ಷ ಸ್ಥಾನವನ್ನು ಸಾಮಾನ್ಯ ವರ್ಗಕ್ಕೆ ಮೀಸಲಿಡಲಾಗಿತ್ತು. ಇದರನ್ವಯ ಜಿಲ್ಲಾಧಿಕಾರಿಗಳ ಆದೇಶದನ್ವಯ ಪತ್ರ ಸಂಖ್ಯೆ ಚು.ಸಿ ಆರ್ 14/2019-20 ದಿನಾಂಕ 9/10/2020 ರಂತೆ ಉಪ ವಿಭಾಗಾಧಿಕಾರಿಗಳು 22/10/2020 ರಲ್ಲಿ ಚುನಾವಣೆ ನಿಗದಿಪಡಿಸಿ ಚುನಾವಣೆ ಪ್ರಕ್ರಿಯೆ ಮುಗಿಸಿ ಫಲಿತಾಂಶವನ್ನು ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ಕಾಯ್ದಿರಿಸಿದ್ದರು.

ಅನಂತರ ಸರ್ವೋಚ್ಛ ನ್ಯಾಯಾಲಯದ ಆದೇಶದ ಸಂಖ್ಯೆ ಎಸ್ ಸಿಎಲ್ ಎ12683/20 ದಿನಾಂಕ 28/10/2020 ರ ಆದೇಶ ಹಾಗೂ ಹೈಕೋರ್ಟ್ ಬೆಂಗಳೂರು ಇವರ ಆದೇಶ ಸಂಖ್ಯೆ ಡಬ್ಲ್ಯೂ ಎ516/2020 ದಿನಾಂಕ 21/10/2020 ಹಾಗೂ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳ ಪತ್ರ ಸಂಖ್ಯೆ ನಅಇ/84.ಕೆ ಎಂ ಆರ್/2020 ದಿನಾಂಕ 22/4/2021 ಮತ್ತು ಹೈಕೋರ್ಟಿನ ಹೆಚ್ಚುವರಿ ಸರ್ಕಾರಿ ವಕೀಲರ 21/4/2021ರ ಪತ್ರದ ನಿರ್ದೇಶನದಂತೆ ಫಲಿತಾಂಶವನ್ನು ಪ್ರಕಟಿಸಲು ಸೂಚನೆ ನೀಡಿದ್ದಾರೆ.

ಇದರನ್ವಯ ಕರ್ನಾಟಕ ಮುನಿಸಿಪಾಲಿಟಿ (ಅಧ್ಯಕ್ಷ ಮತ್ತು ಉಪಾಧ್ಯಕ್ಷ) ಚುನಾವಣಾ ನಿಯಮಗಳ 1956 ರ ಪ್ರಕಾರ ಶ್ರೀಮತಿ ಡಿ.ಯು. ರತ್ನಾ ಕೋಂ ಡಿ. ಉಜ್ಜೇಶ್ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಎಂ. ಬಾಬುಲಾಲ್ ಬಿನ್ ಅಬ್ದುಲ್ ಮಜೀದ್ ಸಾಬ್ ಇವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ ಎಂದು ಚುನಾವಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್ ತಿಳಿಸಿದ್ದಾರೆ.

# ಯೋಗ ಪರಂಪರೆ : ಅಥಣಿ ಶಿವಯೋಗಿಗಳು ಅಗ್ರಗಣ್ಯರು



ದಾವಣಗೆರೆ, ಏ. 28- ಅಥಣಿ ಶಿವಯೋಗಿಗಳು ನಮ್ಮ ದೇಶ ಕಂಡ ಮಹಾನ್ ಶಿವಯೋಗಿಗಳು. ದೇಶದ ಯೋಗ ಪರಂಪರೆ ಯಲ್ಲಿ ಅಗ್ರಗಣ್ಯರಾಗಿದ್ದಾರೆ ಎಂದು ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ಹೇಳಿದರು.

ದಾವಣಗೆರೆ ವಿರಕ್ತಮಠದಲ್ಲಿ ಸರಳವಾಗಿ ನಡೆದ ಅಥಣಿ ಶಿವಯೋಗಿಗಳವರ 100ನೇ ವರ್ಷದ ಸ್ಮರಣೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

ಶಿವಯೋಗ ಸಿದ್ದಿಯನ್ನು ಸಂಪಾದಿಸಿ, ಬಳಿ ಬಂದ ಭಕ್ತರ ಕಷ್ಟಗಳನ್ನು ನಿವಾರಣೆ ಮಾಡಿದ, ಧಾರ್ಮಿಕ ಕ್ಷೇತ್ರದ ಮೌಂಟ್ ಎವರೆಸ್ಟ್ ಶಿಖರ ಅಥಣಿ ಮುರುಗೇಂದ್ರ ಶಿವಯೋಗಿಗಳು. ಅವರ ಮಹಿಮೆಯಿಂದ ಕಾವಿ ಬಟ್ಟೆಯನ್ನು ಧರಿಸಿದವರಿಗೆ ಗೌರವ ಸಿಗುತ್ತಿದೆ ಎಂದರು.

ಸ್ವಾಮಿಯಾದರೆ ಮೃತ್ಯುಂಜಯ ಅಪ್ಪಗಳಂತೆ ಆಗಬೇಕು, ಜಗದ್ಗುರುಗಳಾದರೆ ಜಯದೇವ ಜಗದ್ಗುರುಗಳಂತೆ ಆಗಬೇಕು. ಶಿವಯೋಗಿಯಾದರೆ ಅಥಣಿ ಶಿವಯೋಗಿಯಂತೆ ಆಗಬೇಕು ಎಂಬ ಮಾತು ಪ್ರಚಲಿತವಾಗಿದೆ. ಕಾರಣ ಅಂತಹ ಶ್ರೇಷ್ಠ ಬದುಕನ್ನು ಅವರು ಬಾಳಿದರು. ನಡೆ ನುಡಿಗಳು ಒಂದಾದ ಬದುಕು ಶಿವಯೋಗಿಗಳದ್ದು. ಅವರು ಎಂದೂ, ಯಾರಿಗೂ ಬೋಧನೆ ಮಾಡಲಿಲ್ಲ. ತಮ್ಮ ನಿಜಾಚರಣೆಯ ಬದುಕಿನಿಂದ ಬೋಧಿಸಿದರು. ಅಂತಹ ಮಹಾತ್ಮರನ್ನು ಸ್ಮರಿಸೋಣ. ಅವರ ಆದರ್ಶದ ದಾರಿಯಲ್ಲಿ ನಡೆಯೋಣ ಎಂದರು.

ಮಹಾತ್ಮರನ್ನು ಸ್ಮರಿಸಿದರೆ ನಮಗೆ ಶಾಂತಿ, ನೆಮ್ಮದಿ ಸಿಗುತ್ತದೆ. ಕಾರಣ ತಮ್ಮ ಶಿವಯೋಗ ಸಾಧನೆಯಿಂದ ಆಧ್ಯಾತ್ಮಿಕ ಶಕ್ತಿಯನ್ನು ಪಡೆದಿರುತ್ತಾರೆ. ಅಂತವರ ಹೆಸರುಗಳು ಮಂತ್ರಗಳಾಗುತ್ತವೆ. ಹಾಗಾಗಿ ನಾವು ಅವರನ್ನು ಸ್ಮರಣೆ ಮಾಡಿದರೆ ನಮ್ಮ ಕಷ್ಟಗಳು ಪರಿಹಾರವಾಗುತ್ತವೆ. ಶಿವಯೋಗಿಗಳಿಗೆ ಬಸವಣ್ಣನವರೇ ಬಲ. ಬಸವ ತತ್ವಗಳನ್ನು ಪಾಲಿಸಿಕೊಂಡು ಬಂದು ಶ್ರೇಷ್ಠರು, ಸರ್ವಜನರನ್ನು ಉದ್ಧರಿಸಿದ ಒಬ್ಬ ಸಮಾಜ ಯೋಗಿಯಾಗಿದ್ದಾರೆ ಎಂದು ಸ್ವಾಮೀಜಿ ಹೇಳಿದರು.

ವಿರಕ್ತಮಠದ ಕಾರ್ಯದರ್ಶಿ ಕಣಕುಪ್ಪಿ ಮುರುಗೇಶಪ್ಪ, ಎಸ್.ಜೆ.ಎಂ.ಶಾಲೆಯ ಮುಖ್ಯ ಶಿಕ್ಷಕ ರೋಷನ್, ಪಾರುಖ್, ಜಗದೀಶ್ , ಅಸಗೋಡು ಶಂಭಣ್ಣ, ಶಾಂತಕುಮಾರಿ ಹಾಗು ಇತರರು ಇದ್ದರು.

### ಬಸವಪ್ರಭು ಶ್ರೀ


**ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,**
ಪ್ರಧಾನ ಕಚೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ. ರಸ್ತೆ, ದಾವಣಗೆರೆ-577 002.

**ಬ್ಯಾಂಕಿನ ಸದಸ್ಯರು/ಶೇವಣಿದಾರರ/ಗ್ರಾಹಕರ ಗಮನಕ್ಕೆ**

ನಗರದಲ್ಲಿ ಕೊರೊನಾ ವೈರಸ್ ಹರಡುವಿಕೆಯನ್ನು ತಡೆಗಟ್ಟುವುದರ ಮುನ್ನೆಚ್ಚರಿಕೆ ಕ್ರಮವಾಗಿ ಕರ್ನಾಟಕ ಸರ್ಕಾರದ ಆದೇಶ ಹಾಗೂ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ 4 ತಾಸುಗಳಿಗೆ ಬ್ಯಾಂಕಿಂಗ್ ವ್ಯವಹಾರ ಸೀಮಿತಗೊಂಡಿದ್ದು, ಅದರಂತೆ ನಮ್ಮ ಬ್ಯಾಂಕಿನ ವ್ಯವಹಾರದ ವೇಳೆಯನ್ನು ದಿನಾಂಕ 29.04.2021 ರಿಂದ 12.05.2021 ರವರೆಗೆ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಾತ್ರ (ಎ.ಟಿ.ಎಂ.ಗಳನ್ನು ಹೊರತುಪಡಿಸಿ) ನಿಗದಿಗೊಳಿಸಿದೆ. ಆದ್ದರಿಂದ ಗ್ರಾಹಕರು ಎಂದಿನಂತೆ ಸಹಕರಿಸಲು ಈ ಮೂಲಕ ಕೋರಿದೆ.

| ಕೋಗುಂಡಿ ಬಕ್ಕೇಶಪ್ಪ | ಅಂದನೂರು ಮುಪ್ಪಣ್ಣ | ಡಿ.ವಿ. ಆರಾಧ್ಯಮಠ್ |
|---|---|---|
| ಅಧ್ಯಕ್ಷರು | ಉಪಾಧ್ಯಕ್ಷರು | ಪ್ರಧಾನ ವ್ಯವಸ್ಥಾಪಕರು |

# ಶವ ಸಾಗಿಸಲು ನಗರದಲ್ಲಿ ಮೂರು ಉಚಿತ ವಾಹನ : ಡಿಸಿ

ದಾವಣಗೆರೆ, ಏ. 28 - ನಗರದಲ್ಲಿ ಜಿಲ್ಲಾಸ್ಪತ್ರೆ ಹಾಗೂ ಪಾಲಿಕೆಯಿಂದ ಮೂರು ಶವ ಸಾಗಿಸುವ ವಾಹನಗಳನ್ನು ವ್ಯವಸ್ಥೆ ಮಾಡಲಾಗಿದ್ದು, ಈ ವಾಹನಗಳ ಮೂಲಕ ಶವ ಸಾಗಿಸಲು ಯಾವುದೇ ಶುಲ್ಕ ಪಾವತಿ ಅಗತ್ಯವಿಲ್ಲ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಜಿಲ್ಲಾಸ್ಪತ್ರೆಯಲ್ಲೇ ಎರಡು ವಾಹನಗಳನ್ನು ನಿಲ್ಲಿಸುವ ವ್ಯವಸ್ಥೆ ಮಾಡಲಾಗಿದೆ. ಪಾಲಿಕೆಯ ಮುಕ್ತಿವಾಹಿನಿ ಪಡೆಯಲು ಡಾ.ಸಂತೋಷ್‌ಕುಮಾರ್ ಮೊಬೈಲ್ ಸಂಖ್ಯೆ 9448655704 ಇವರನ್ನು ಸಂಪರ್ಕಿಸಬಹುದು ಎಂದು ಹೇಳಿದರು.

ಜಿಲ್ಲೆಯಲ್ಲಿ ರೆಮ್ಡಿಸಿವಿರ್ ಔಷಧಿಯ ಅಗತ್ಯವಿರುವ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅವರಿಗೆ ತಿಳಿಸಲಾಗಿದೆ. ಇಂದೇ 800 ವಯಾಲ್‌ಗಳಷ್ಟು ಔಷಧಿ ಬರಲಿದೆ ಎಂದು ಬೀಳಗಿ ಹೇಳಿದರು. ಲಸಿಕೆಗೆ ಇತ್ತೀಚೆಗೆ ಹೆಚ್ಚು ಜನರು ಮುಂದೆ ಬರುತ್ತಿದ್ದಾರೆ. ನಗರದ ಮೋತಿ ವೀರಪ್ಪ ಕಾಲೇಜಿನಲ್ಲಿ ಸ್ಥಾಪಿಸಲಾಗಿರುವ ಲಸಿಕಾ ಕೇಂದ್ರಕ್ಕೆ ಬರುವವರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಜಿಲ್ಲಾಸ್ಪತ್ರೆಯ ಆವರಣದಲ್ಲಿ ಖಾಸಗಿ ಆಂಬ್ಯುಲೆನ್ಸ್‌ಗಳು ಶವ ಸಾಗಣೆಗೆ ನಿಂತಿರುತ್ತವೆ. ಇವರು ಹೆಚ್ಚಿನ ಶುಲ್ಕ ಪಡೆಯುವುದು ಗಮನಕ್ಕೆ ಬಂದಿದೆ. ಆರ್.ಟಿ.ಓ. ನಿಯಮಗಳ ಪ್ರಕಾರ ಶುಲ್ಕ ಪಡೆಯಬೇಕು ಎಂದು ಎಸ್ಪಿ ಹನುಮಂತರಾಯ ಈ ಸಂದರ್ಭದಲ್ಲಿ ತಿಳಿಸಿದ್ದಾರೆ.

ಜಿಲ್ಲಾ ವೈದ್ಯಾಧಿಕಾರಿ ಡಾ. ನಾಗರಾಜ್ ಮಾತನಾಡಿ, ಜಿಲ್ಲಾ ಆಸ್ಪತ್ರೆಯಲ್ಲಿ ಬೆಡ್‌ಗಳ ಸಂಖ್ಯೆ ಹೆಚ್ಚಿಸಲಾಗಿದೆ. ಆದರೆ, ಸಿಬ್ಬಂದಿಯ ಸಂಖ್ಯೆ ಆಸ್ಪತ್ರೆ ಆರಂಭದಿಂದಲೂ ಕೊರತೆ ಇದೆ. ಪ್ರಸಕ್ತ 156 ಸ್ಟಾಫ್ ನರ್ಸ್‌ಗಳಿದ್ದು, ಒಟ್ಟು 503 ನರ್ಸ್‌ಗಳ ಅಗತ್ಯವಿದೆ. ಈ ಬಗ್ಗೆ ಸರ್ಕಾರಕ್ಕೆ ತಿಳಿಸಲಾಗಿದೆ ಎಂದರು.

ವೆಂಟಿಲೇಟರ್ ನಿರ್ವಹಣೆಗೆ ಸಿಬ್ಬಂದಿ ಕೊರತೆ ಇರುವ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, 15 ಐ.ಸಿ.ಯು.ಗಳ ನಿರ್ವಹಣೆಗೆ ಮಾನವ ಸಂಪನ್ಮೂಲ ಕಲ್ಪಿಸುವುದಾಗಿ ಈಗಾಗಲೇ ತಿಳಿಸಲಾಗಿದೆ. ಖಾಸಗಿಯಾಗಿ ಸಿಬ್ಬಂದಿಯನ್ನು ಪಡೆದು ಪರಿಸ್ಥಿತಿ ನಿರ್ವಹಿಸಲಾಗುತ್ತಿದೆ ಎಂದು ತಿಳಿಸಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ರಾಘವನ್ ಮಾತನಾಡಿ, ಆಕ್ಸಿಜನ್ ಸ್ಯಾಚುರೇಷನ್ ಶೇ.90-94ರಷ್ಟಿದ್ದರೂ ಸಹ ಆಕ್ಸಿಜನ್ ಬೆಡ್ ರಹಿತವಾಗಿ ಪರಿಸ್ಥಿತಿ ನಿಭಾಯಿಸಬಹುದು ಎಂದು ಇತ್ತೀಚಿನ ಅಧ್ಯಯನಗಳು ತಿಳಿಸಿವೆ. ಆಕ್ಸಿಜನ್ ಅನ್ನು ಅಗತ್ಯವಿರುವ ಕೊರೊನಾ ರೋಗಿಗಳಿಗೆ ಮಾತ್ರ ಒದಗಿಸುವುದು ಸೂಕ್ತ ಎಂದರು.

ಕೊರೊನಾ ಸೋಂಕಿನಲ್ಲಿ ಐದು ಹಂತಗಳಿದ್ದು, ಮಧ್ಯಮ ಹಾಗೂ ತೀವ್ರ ಸೋಂಕಿನ ಪ್ರಕರಣಗಳಲ್ಲಿ ಮಾತ್ರ ರೆಮ್ಡಿಸಿವಿರ್ ಬೇಕಾಗುತ್ತದೆ. ಉಳಿದಂತೆ ಎಲ್ಲರಿಗೂ ಈ ಔಷಧಿ ಉಪಯುಕ್ತವಲ್ಲ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

# ಎಪಿಎಂಸಿ : ವಹಿವಾಟು ಅವಧಿ ವಿಸ್ತರಣೆಗೆ ಒತ್ತಾಯ


ಎಪಿಎಂಸಿ ಮಾರುಕಟ್ಟೆಗೆ ಬಂದಿರುವ ಶೇಂಗಾ

ದಾವಣಗೆರೆ, ಏ.28-ಕೃಷಿ ಉತ್ಪನ್ನ ಮಾರುಕಟ್ಟೆ ವಹಿವಾಟನ್ನು ಬೆಳಿಗ್ಗೆ 6 ರಿಂದ 10ರವರೆಗೆ ಮಾತ್ರ ಅವಕಾಶ ನೀಡಿರುವ ಬಗ್ಗೆ ಖರೀದಿದಾರರು, ರೈತರು ಹಾಗೂ ಹಮಾಲರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬೆಳಿಗ್ಗೆ 11ರ ಸಮಾರಿಗೆ ಎಪಿಎಂಸಿ ಕಚೇರಿ ಬಳಿ ಧಾವಿಸಿದ ಖರೀದಿದಾರರು, ಹಮಾಲರು ಅವಧಿ ವಿಸ್ತರಣೆಗಾಗಿ ಅಧಿಕಾರಿಗಳನ್ನು ಒತ್ತಾಯಿಸಿದರು. ಆದರೆ ಅಧಿಕಾರಿಗಳು ಸರ್ಕಾರದ ಮಾರ್ಗಸೂಚಿ ಅನ್ವಯ 10ರ ನಂತರ ಯಾವುದೇ ವಹಿವಾಟು ನಡೆಸುವಂತಿಲ್ಲ ಎಂದರು.

ಈ ಸಂದರ್ಭದಲ್ಲಿ ಪತ್ರಿಕೆಯೊಂದಿಗೆ ಮಾತನಾಡಿದ ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರ ಗಿರೀಶ್, ಬೆಳಿಗ್ಗೆ 6 ರಿಂದ 10ರವರೆಗೆ ವಹಿವಾಟಿಗೆ ಅವಕಾಶ ನೀಡಿದ್ದರಿಂದ ರೈತರಿಗೆ ತೀವ್ರ ತೊಂದರೆ ಯಾಗುತ್ತಿದೆ. ಆದ್ದರಿಂದ ನಾವು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಸಂಜೆ ವರೆಗೆ ಅವಕಾಶ ನೀಡುವಂತೆ ಮನವಿ ಮಾಡಿದೆವು. ಆದರೆ ಜಿಲ್ಲಾಧಿಕಾರಿಗಳು ರಾಜ್ಯ ಸರ್ಕಾರದಿಂದ ಈ ಬಗ್ಗೆ ಆದೇಶವಿದ್ದು ಅದನ್ನು ಪಾಲಿಸಲೇ ಬೇಕು ಎಂದು ಹೇಳಿದ್ದಾರೆ ಎಂದರು. ಪ್ರಸ್ತುತ ಎಪಿಎಂಸಿಗೆ ಸಾವಿರಾರು ಕ್ವಿಂಟಾಲ್ ಭತ್ತ, ರಾಗಿ, ಶೇಂಗಾ ಅವಕ ಬರುತ್ತಿದೆ. ಖರೀದಿದಾರರು ರೈತರಿಂದ ಖರೀದಿಸಿದ ಧಾನ್ಯವನ್ನು ತರುವುದೇ ಬೆಳಿಗ್ಗೆ 10ರ ನಂತರ. ಆ ಮೇಲೆ ಟೆಂಡರ್ ಪ್ರಕ್ರಿಯೆ ನಡೆಸಬೇಕು. ಆದರೆ ಸರ್ಕಾರ ಸೂಚಿಸಿರುವ ಅವಧಿಯೊಳಗೆ ಅದು ಸಾಧ್ಯವಿಲ್ಲ.

ಖರೀದಿ ಪ್ರಕ್ರಿಯೆ ನಡೆಯದಿದ್ದರೆ ರೈತರಿಗೆ ತೊಂದರೆಯಾಗುತ್ತದೆ. ಅಲ್ಲದೆ ಹಸಿ ಭತ್ತವಿದ್ದರೆ 15-20 ದಿನಗಳ ಕಾಲ ಇಟ್ಟುಕೊಂಡರೆ ಹಾಳಾಗುವ ಸಾಧ್ಯತೆ ಇದೆ ಎಂದು ಖರೀದಿದಾರರು ಆರೋಪಿಸಿದರು.

ಕಳೆದ ಬಾರಿ ಲಾಕ್‌ಡೌನ್ ಅವಧಿಯಲ್ಲಿ ಎಪಿಎಂಸಿ ವಹಿವಾಟಿಗೆ ಅವಕಾಶವಿತ್ತು. ಹಮಾಲರಿಗೂ ಐಡಿ ಕಾರ್ಡ್ ನೀಡಲಾಗಿತ್ತು. ಆದರೆ ಈಗ ಹಮಾಲರು ಎಪಿಎಂಸಿಗೆ ಬರಲು ಪೊಲೀಸರು ಬಿಡುತ್ತಿಲ್ಲ. ವಹಿವಾಟು ಇಲ್ಲದೆ ನೂರಾರು ಹಮಾಲರು ಸಂಜೆವರೆಗೆ ನಡೆಯಲು ಅನುಮತಿ ಮಾಡಿಕೊಡಬೇಕೆಂದು ಆಗ್ರಹಿಸಿದರು.

ಒಟ್ಟಿನಲ್ಲಿ ಎಪಿಎಂಸಿ ವಹಿವಾಟು ಪ್ರಕ್ರಿಯೆ ನಡೆಯದ ಕಾರಣ ರೈತರ ಅವಕ ಹಾಗೆಯೇ ಉಳಿದಿತ್ತು. ಮಧ್ಯಾಹ್ನದ ವೇಳೆಗೆ ರೈತರು, ದಲಾಲರು, ಹಮಾಲರು ಸರ್ಕಾರದ ಕ್ರಮಕ್ಕೆ ಅಸಮಾಧಾನ ವ್ಯಕ್ತಪಡಿಸುತ್ತಾ ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಹೊರ ನಡೆದರು.

# ಹರಿಹರ ನಗರಸಭೆ ಅಧ್ಯಕ್ಷರಾಗಿ ಡಿ.ಯು. ರತ್ನ

## ಉಪಾಧ್ಯಕ್ಷರಾಗಿ ಎಂ. ಬಾಬುಲಾಲ್




ಹರಿಹರ, ಏ.28- ನಗರಸಭೆ ಅಧ್ಯಕ್ಷರಾಗಿ ಜೆಡಿಎಸ್ ಪಕ್ಷದ ಸದಸ್ಯೆ ಡಿ.ಯು.ರತ್ನ ಡಿ.ಉಜ್ಜೇಶ್ ಮತ್ತು ಉಪಾಧ್ಯಕ್ಷರಾಗಿ ಕಾಂಗ್ರೆಸ್ ಪಕ್ಷದ ಸದಸ್ಯ ಎಂ. ಬಾಬುಲಾಲ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಹಾಗೂ ಉಪ ವಿಭಾಗಾಧಿಕಾರಿ ಮಮತಾ ಹೊಸಗೌಡರ್ ಘೋಷಿಸಿದರು.

ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆ, ಉಪಾಧ್ಯಕ್ಷ ಸ್ಥಾನ ಸಾಮಾನ್ಯ ಮೀಸಲಾತಿಗೆ ನಿಗದಿಯಾಗಿತ್ತು. ಕೊನೆಗೂ ಹರಿಹರ ನಗರಸಭೆಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಭಾಗ್ಯ ದೊರೆತಂತಾಗಿದ್ದು, ಸರ್ವೋಚ್ಛ ನ್ಯಾಯಾಲಯದಲ್ಲಿದ್ದ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಮೀಸಲಾತಿ ಹೋರಾಟಕ್ಕೆ ತೆರೆ ಬಿದ್ದಂತಾಗಿದೆ.

ಎಸ್‌ಟಿಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನವನ್ನು ಸಾಮಾನ್ಯ ಮಹಿಳೆಗೆ ಬದಲಿಸಿ ಅ. 8 ರಂದು ಸರ್ಕಾರ ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದ ದಿನೇಶ್ ಬಾಬು ರಾಜ್ಯ ಹೈಕೋರ್ಟಿನಲ್ಲಿ ತಡೆ ನೀಡುವಂತೆ ಅರ್ಜಿ ಸಲ್ಲಿಸಿದ್ದರು. ಆದರೆ, ಹೈಕೋರ್ಟ್ ಚುನಾವಣೆ ನಡೆಸುವಂತೆ ಗ್ರೀನ್ ಸಿಗ್ನಲ್ ನೀಡಿತ್ತು.

ಇದನ್ನು ಪ್ರಶ್ನಿಸಿ ಹಾಸನ, ಅರಸೀಕೆರೆ, ಹರಿಹರ, ಕೊಪ್ಪಳ, ಶಿಡ್ಲಘಟ್ಟ ನಗರಸಭಾ ಸದಸ್ಯರು ಸರ್ವೋಚ್ಛ ನ್ಯಾಯಾಲಯದಲ್ಲಿ ದಾಖಲಿಸಿರುವ ಎಸ್‌ಎಲ್‌ಪಿ ಸಂಖ್ಯೆ 12683/2020 ರಲ್ಲಿ ದಿನಾಂಕ (3ನೇ ಪುಟಕ್ಕೆ)

# ಅಕ್ಕಿ ಕೇಳಿದವನಿಗೆ ಸಾಯಿ ಎಂದ ಕತ್ತಿ

**✦ ಮುಖ್ಯಮಂತ್ರಿ ವಿಷಾದ**

**✦ ಗೋಧಿ ಬೇಡವಾದರೆ 5 ಕೆಜಿ ಅಕ್ಕಿಯ ವ್ಯವಸ್ಥೆ**

ಬೆಂಗಳೂರು, ಏ. 28 - ಅಕ್ಕಿ ಕೇಳಿದ ರೈತನಿಗೆ ಆಹಾರ ಮತ್ತು ನಾಗರಿಕ ಖಾತೆ ಸಚಿವ ಉಮೇಶ್ ಕತ್ತಿ ನೀಡಿದ ಉತ್ತರದ ಬಗ್ಗೆ ಬೇಸರ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿಷಾದ ವ್ಯಕ್ತಪಡಿಸಿದ್ದಾರೆ.

ಉಮೇಶ್ ಕತ್ತಿ ಆಹಾರ ಮತ್ತು ನಾಗರಿಕ ಖಾತೆ ಸಚಿವರು ರೈತನೊಬ್ಬ 5 ಕೆ.ಜಿ ಅಕ್ಕಿ ಬದಲಾಗಿ 3 ಕೆ.ಜಿ ನೀಡುತ್ತಿದ್ದು ಜನ ಸಾಯಬೇಕಾ? ಬದುಕಬೇಕಾ? ಎಂದು ಕೇಳಿದಾಗ ಸಾಯಿ ಅಂತ ಹೇಳಿರುವುದು ಒಬ್ಬ ಸಚಿವನಾಗಿ ಸರಿಯಲ್ಲ ಮುಖ್ಯಮಂತ್ರಿ ಎಂದು ಹೇಳಿದ್ದಾರೆ.

ಆ ಭಾಗದಲ್ಲಿರುವ ಜನರಿಗೆ ಗೋಧಿ ಬೇಡವಾದರೆ 5 ಕೆ.ಜಿ ಅಕ್ಕಿಯನ್ನು ಕೊಡಲು ವ್ಯವಸ್ಥೆ ಮಾಡಲಾಗುವುದು. ಉಮೇಶ್ ಕತ್ತಿ ಅವರ ಹೇಳಿಕೆಗೆ ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಪಡಿತರ ಅಕ್ಕಿ ಕಡಿತ ಮಾಡಿರುವುದನ್ನು ರೈತನೊಬ್ಬ ಪ್ರಶ್ನಿಸಿ, ಲಾಕ್‌ಡೌನ್ ಸಂದರ್ಭದಲ್ಲಿ ಕೇವಲ 2 ಕೆಜಿ ಅಕ್ಕಿ ಕೊಡುತ್ತಿದ್ದೀರಿ. ಇಷ್ಟು ಕಡಿಮೆ ಅಕ್ಕಿಯಲ್ಲಿ ಬದುಕುವುದು ಹೇಗೆ? ಎಂದು ಪ್ರಶ್ನೆ ಮಾಡಿದ್ದರು. ಇದಕ್ಕೆ ಉತ್ತರಿಸಿದ ಸಚಿವರು ಎರಡು ಕೆಜಿ ಅಕ್ಕಿ ಜೊತೆಗೆ ಮೂರು ಕೆಜಿ ರಾಗಿ ಕೊಡುತ್ತೇವೆ. ಉತ್ತರ ಕರ್ನಾಟಕ ಭಾಗಕ್ಕೆ ಮೂರು ಕೆಜಿ ಜೋಳ ನೀಡುತ್ತೇವೆ. ಒಟ್ಟು ಐದು ಕೆಜಿ ಪಡಿತರ ವಿತರಿಸುತ್ತೇವೆ ಎಂದಿದ್ದರು. ಇದು ಸಾಲುವುದಿಲ್ಲ, ಈಗ ಲಾಕ್‌ಡೌನ್ ಬೇರೆ ಇದೆ. ದುಡಿಮೆ ಇಲ್ಲ ಎಂದು ಈಶ್ವರ್ ಎಂಬ ರೈತ ಹೇಳಿದ್ದರು.

ಮೇ ಹಾಗೂ ಜೂನ್ ತಿಂಗಳಲ್ಲಿ ಕೇಂದ್ರ ಸರ್ಕಾರ ತಲಾ ಐದು ಕೆ.ಜಿ. ಅಕ್ಕಿ ಕೊಡಲಿದೆ. ಬರುವ ತಿಂಗಳಲ್ಲೇ ಇದು ಸಿಗಲಿದೆ ಎಂದು ಸಚಿವರು ಹೇಳಿದ್ದರು.

ಅಲ್ಲಿಯವರೆಗೆ ಉಪವಾಸ ಇರೋದಾ? ಸತ್ತು ಹೋಗೋದಾ? ಎಂದು ರೈತ ಕೇಳಿದ್ದ. ಇದಕ್ಕೆ ಉತ್ತರಿಸಿದ್ದ ಕತ್ತಿ, ಸತ್ತು ಹೋಗುವುದು ಒಳ್ಳೆಯದು. ಅದಕ್ಕಿಂತ ಅಕ್ಕಿ ಮಾರುವುದನ್ನು ಬಂದ್ ಮಾಡಿ ಎಂದು ತರಾಟೆಗೆ ತೆಗೆದುಕೊಂಡ ಸಚಿವರು ಫೋನ್ ಕಟ್ ಮಾಡಿದ್ದರು.

# 18 ವರ್ಷದವರ ಲಸಿಕೆ ನೋಂದಣಿಗೆ ತೊಡಕು

ನವದೆಹಲಿ, ಏ. 28 - 18 ವರ್ಷ ಮೀರಿದವರು ಲಸಿಕೆ ಪಡೆಯಲು ಕೊವಿನ್ ವೆಬ್ ತಾಣದಲ್ಲಿ ಹೆಸರು ನೋಂದಾಯಿಸುವ ಮೊದಲ ದಿನದಂದು ಹಲವರು ತೊಡಕುಗಳನ್ನು ಎದುರಿಸಿದ್ದು, ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ದೂರಿದ್ದಾರೆ. ಮೇ 1ರಿಂದ 18 ವರ್ಷ ಮೀರಿದವರಿಗೆ ಲಸಿಕೆ ನೀಡಲಾಗುತ್ತದೆ. ಪೋರ್ಟಲ್ ಕೆಲಸ ಮಾಡುತ್ತಿಲ್ಲ ಎಂದು ಕೆಲವರು ಹೇಳಿದರೆ, ಪೋರ್ಟಲ್ ಕ್ರಾಶ್ ಆಗಿದೆ ಎಂದು ಇನ್ನೂ ಕೆಲವರು ತಿಳಿಸಿದ್ದಾರೆ. ಸಂಜೆ 4 ಗಂಟೆ ಸಮಯದಲ್ಲಿ ಸಣ್ಣ ಲೋಪ ಉಂಟಾಗಿತ್ತು. ಇದನ್ನು ಸರಿಪಡಿಸಲಾಗಿದೆ ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಮೇ 9 ರ ಸಾಹಿತ್ಯ ಪರಿಷತ್ ಚುನಾವಣೆ ಮುಂದೂಡಿಕೆ

ಬೆಂಗಳೂರು, ಏ.28- ಕೋವಿಡ್ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಹಾಗೂ ಜಿಲ್ಲಾ ಮತ್ತು ಗಡಿ ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಮೇ 9 ರಂದು ನಿಗದಿಯಾಗಿದ್ದ ಚುನಾವಣೆಯನ್ನು ಅನಿರ್ದಿಷ್ಟಾವಧಿಗೆ ಮುಂದೂಡಿ ಸರ್ಕಾರ ಆದೇಶ ಹೊರಡಿಸಿದೆ.

ಪ್ರಸ್ತುತ ಪರಿಸ್ಥಿತಿ ಗಂಭೀರವಾಗಿದ್ದು, ಮತದಾರರು ಮತ್ತು ಚುನಾವಣಾ ಸಿಬ್ಬಂದಿಗಳ ಆರೋಗ್ಯದ ಹಿತದೃಷ್ಟಿಯಿಂದ ಚುನಾವಣೆ ನಡೆಸುವುದು ಸೂಕ್ತವಲ್ಲ. ಕೋವಿಡ್ ಸಾಂಕ್ರಾಮಿಕ ಕಡಿಮೆಯಾಗುವವರೆಗೂ ಚುನಾವಣೆಯನ್ನು ಮುಂದೂಡಲು ತೀರ್ಮಾನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣಾ ಪ್ರಕ್ರಿಯೆಯನ್ನು ಯಾವ ಹಂತದಲ್ಲಿ ಇರುತ್ತದೆಯೋ ಅಲ್ಲಿಂದ ಮುಂದೂಡಿ, ಮುಂದೆ ಅದೇ ಹಂತದಿಂದ ಚುನಾವಣೆ ಪ್ರಕ್ರಿಯೆಯನ್ನು ಯಥಾವತ್ತಾಗಿ ನಡೆಸಲು ಕ್ರಮ ಕೈಗೊಳ್ಳುವಂತೆ ಸರ್ಕಾರ ಆದೇಶದಲ್ಲಿ ತಿಳಿಸಿದೆ.

# ಗೃಹರಕ್ಷಕಿ ಶಿಲ್ಪ ಅವರಿಗೆ ಬೆಳ್ಳಿ ಪದಕ



ದಾವಣಗೆರೆ, ಏ.28- ಬೆಂಗಳೂರು ತರಬೇತಿ ಅಕಾಡೆಮಿಯಲ್ಲಿ ಇತ್ತೀಚೆಗೆ ನಡೆದ ಗೃಹ ರಕ್ಷಕಿಯರ ನಿಸ್ತಂತು ಚಾಲನಾ ತರಬೇತಿಯಲ್ಲಿ ಗೃಹರಕ್ಷಕಿ ಹೆಚ್.ಶಿಲ್ಪ ಅವರು ರಾಜ್ಯಮಟ್ಟದಲ್ಲಿ ದ್ವಿತೀಯ ಸ್ಥಾನ ಮತ್ತು ಬೆಳ್ಳಿ ಪದಕ ಪಡೆದಿದ್ದಾರೆ.

**ರಂಜಾನ್ ರೋಜಾ ಸಮಯ**

**ದಿನಾಂಕ : 29.04.2021**
**ಇಫ್ತೇಯಾರಿ ಸಮಯ : 6-48**

**ದಿನಾಂಕ 30.04.2021**
**ಸಹೇರಿ ಸಮಯ : 4-48**

# ಕೃಷಿ ಚಟುವಟಿಕೆಗಳಿಗೆ ಅಗ್ರಿ ವಾರ್ ರೂಮ್ ಆರಂಭ

ಬೆಂಗಳೂರು, ಏ. 28 - ರಾಜ್ಯ ಸರ್ಕಾರ ರಾಜ್ಯದಲ್ಲಿ ಘೋಷಿಸಿರುವ ಈ ಹದಿನಾಲ್ಕು ದಿನಗಳ ಲಾಕ್‌ಡೌನ್‌ನಲ್ಲಿ ರೈತರಿಗಾಗಲೀ, ಕೃಷಿ ಚಟುವಟಿಕೆಗಳಿಗಾಗಲಿ ಯಾವುದೇ ತೊಂದರೆಯಾಗದಿರಲೆಂದು ಕೃಷಿ ಇಲಾಖೆ ಮತ್ತೆ ಅಗ್ರಿವಾರ್ ರೂಮ್ ಆರಂಭಿಸಿದೆ.

ಕಳೆದ ವರ್ಷ ಕೋವಿಡ್ ಲಾಕ್‌ಡೌನ್ ಅವಧಿಯಲ್ಲಿ ಅಗ್ರಿವಾರ್ ರೂಮ್ ಆರಂಭಿಸಿರುವಂತೆಯೇ ಈ ಬಾರಿಯೂ ರೈತರಿಗೆ ಕೃಷಿ ಸಚಿವ ಬಿ.ಸಿ.ಪಾಟೀಲ್ ಕೃಷಿ ಇಲಾಖೆಯಲ್ಲಿ "ಅಗ್ರಿ ವಾರ್ ರೂಮ್" ಆರಂಭಿಸಿದ್ದಾರೆ.

ಈಗಾಗಲೇ ಮುಂಗಾರು ಆರಂಭವಾಗುತ್ತಿರುವುದರಿಂದ ಲಾಕ್‌ಡೌನ್ ಅವಧಿಯಲ್ಲಿ ಯಾವುದೇ ಇಲಾಖೆಯಾಗಲೀ, ಅಧಿಕಾರಿಗಳಾಗಲೀ ಕೃಷಿ ಪರಿಕರ ಸಾಗಾಣಿಕೆ, ರೈತರ ಕೃಷಿ ಚಟುವಟಿಕೆಗಳಿಗೆ ಅಡ್ಡಿಯನ್ನುಂಟು ಮಾಡಬಾರದು ಎಂದು ಕೃಷಿ ಸಚಿವರು ಕಟ್ಟುನಿಟ್ಟಾಗಿ ಸೂಚಿಸಿದ್ದಾರೆ. ಅಂದ್ಹಾಗೆ ರೈತರಿಗೆ ನೆರವಾಗಲು ಮತ್ತೆ ಅಗ್ರಿ ವಾರ್ ರೂಮ್ ನೆರವು ಕಲ್ಪಿಸಲಿದೆ. ಕೃಷಿ ಕೇಂದ್ರ ಕಚೇರಿಯಲ್ಲಿ ಅಗ್ರಿ ವಾರ್ ರೂಮ್ ಮತ್ತೆ ತೆರೆದಿದ್ದು 080-22210237 ಹಾಗೂ 080-22212818 ಈ ಸಂಖ್ಯೆಗಳು ಸಹಾಯವಾಣಿಯಾಗಿ ಕಾರ್ಯನಿರ್ವಹಿಸಲಿವೆ. ಇವು ಬೆಳಿಗ್ಗೆ 8 ರಿಂದ ರಾತ್ರಿ 8 ರವರೆಗೆ ಕಾರ್ಯನಿರ್ವಹಿಸಲಿವೆ. ಇದಕ್ಕಾಗಿ ಕೃಷಿ ಪ್ರಧಾನ ಕಚೇರಿಯಲ್ಲಿ ಇಬ್ಬರು ತಾಂತ್ರಿಕ ಅಧಿಕಾರಿಗಳು ಹಾಗೂ ಒಬ್ಬ ಉಪಕೃಷಿ ನಿರ್ದೇಶಕರನ್ನು ಉಸ್ತುವಾರಿಗೆ ನೇಮಿಸಲಾಗಿದೆ.

# ಕೋವಿಶೀಲ್ಡ್ 100 ರೂ. ಇಳಿಕೆ

ನವದೆಹಲಿ, ಏ. 28 - ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್.ಐ.ಐ.) ತನ್ನ ಲಸಿಕೆಯಾದ ಕೊವಿಶೀಲ್ಡ್ ಬೆಲೆಯನ್ನು ಈ ಹಿಂದೆ ಪ್ರಕಟಿಸಿದ 400 ರೂ.ಗಳಿಂದ 300 ರೂ.ಗೆ ಇಳಿಕೆ ಮಾಡಿದೆ.

ಕೇಂದ್ರ ಸರ್ಕಾರಕ್ಕೆ ಮೊದಲ ಹಂತದಲ್ಲಿ ಪ್ರತಿ ಡೋಸ್‌ಗೆ 150 ರೂ.ನಂತೆ ಲಸಿಕೆ ಪೂರೈಸಲಾಗಿತ್ತು. ಈಗ 400ರೂ. ಬೆಲೆ ನಿಗದಿ ಪಡಿಸಿರುವುದು ಹೆಚ್ಚಾಗಿದೆ ಎಂಬ ಟೀಕೆಗಳು ಬಂದಿದ್ದವು.

ಸೆರಮ್ ಸಂಸ್ಥೆಯ ದಾನ ಗುಣದ ಸಂಕೇತವಾಗಿ ಡೋಸ್ ಲಸಿಕೆಯ ಬೆಲೆಯನ್ನು 400 ರೂ.ಗಳಿಂದ 300 ರೂ.ಗಳಿಗೆ ಇಳಿಕೆ ಮಾಡಲಾಗಿದೆ. ಇದು ತಕ್ಷಣದಿಂದಲೇ ಜಾರಿಗೆ ಬರಲಿದೆ. ಇದರಿಂದ ರಾಜ್ಯಗಳಿಗೆ ಸಾವಿರಾರು ಕೋಟಿ ರೂ. ಉಳಿತಾಯವಾಗಲಿದೆ. ಇದರಿಂದ ಹೆಚ್ಚು ಜನರು ಲಸಿಕೆ ಪಡೆಯುವ ಜೊತೆಗೆ ಅಸಂಖ್ಯ ಜೀವಗಳು ಉಳಿಯಲಿವೆ ಎಂದು ಕಂಪನಿಯ ಸಿಇಓ ಅದರ್ ಪೂನಾವಾಲಾ ಹೇಳಿದ್ದಾರೆ.

ಸೆರಮ್ ಹಾಗೂ ಭಾರತ್ ಬಯೋಟೆಕ್‌ಗಳು ತಮ್ಮ ಲಸಿಕೆಯ ಬೆಲೆ ಇಳಿಸಬೇಕು ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿತ್ತು ಎಂದು ಮೂಲಗಳು ಹೇಳಿವೆ. ಹಲವಾರು ರಾಜ್ಯಗಳು ಲಸಿಕೆಗಳ ಬೆಲೆ ಹೆಚ್ಚಾಗಿದೆ ಎಂದು ಟೀಕಿಸಿದ್ದವು. ಆದರೆ, ಬೆಲೆಯನ್ನು ಸಮರ್ಥಿಸಿಕೊಂಡಿದ್ದ ಸೆರಮ್, ಲಸಿಕೆ ಸಾಮರ್ಥ್ಯವನ್ನು ಹೆಚ್ಚಿಸಲು ಹಾಗೂ ಇನ್ನಷ್ಟು ಲಸಿಕೆಗಳನ್ನು ಉತ್ಪಾದಿಸಲು ಈ ಕ್ರಮ ಅಗತ್ಯ ಎಂದು ಹೇಳಿತ್ತು.


## 59 ನೇ ವಿವಾಹ ವಾರ್ಷಿಕೋತ್ಸವ ಶುಭಾಶಯ



**ಶ್ರೀ ಡಿ.ಎನ್.ರೇವಣಸಿದ್ದಪ್ಪ,** ನಿವೃತ್ತ ಉಪ ತಹಶೀಲ್ದಾರ್
ಮತ್ತು **ಶ್ರೀಮತಿ ಮೋಕ್ಷದಾಯಿನಿ**

ಇವರು ತಮ್ಮ ವೈವಾಹಿಕ ಜೀವನದ ಸಾರ್ಥಕ 58 ವಸಂತಗಳನ್ನು ಪೂರೈಸಿ ಇಂದು '59ನೇ ವಸಂತ'ಕ್ಕೆ ಪಾದಾರ್ಪಣೆ ಮಾಡುತ್ತಿದ್ದು, ಇವರ ವಿವಾಹ ವಾರ್ಷಿಕೋತ್ಸವಕ್ಕೆ ನಮ್ಮೆಲ್ಲರ ಹಾರ್ದಿಕ ಶುಭಾಶಯಗಳು. ಇವರ ವೈವಾಹಿಕ ಬದುಕು ನೂರ್ಕಾಲ ಸುಖಕರವಾಗಿರಲೆಂದು ಹಾರೈಸುತ್ತಾ, ಭಗವಂತನು ಇವರಿಗೆ ಆಯುರಾರೋಗ್ಯ-ಐಶ್ವರ್ಯ-ಸುಖ-ಶಾಂತಿ ನೆಮ್ಮದಿ ನೀಡಲೆಂದು ಪ್ರಾರ್ಥಿಸುತ್ತೇವೆ.

ಪುತ್ರಿಯರು : ✦ ಶ್ರೀಮತಿ ಶಿವಗಂಗಾ ಮತ್ತು ಶರತ್‌ಬಾಬು
✦ ಶ್ರೀಮತಿ ಶಿವಲೀಲಾ ಮತ್ತು ಪ್ರಶಾಂತ್
✦ ಶ್ರೀಮತಿ ಸುಜಾತ ಮತ್ತು ಪ್ರಕಾಶ್
✦ ಶ್ರೀಮತಿ ನಾಗರತ್ನ ಮತ್ತು ನಾಗರಾಜ್
✦ ಶ್ರೀಮತಿ ಶಾಂತಲಾ ಮತ್ತು ಗುರುಪ್ರಸಾದ್

ಪುತ್ರರು : ✦ ಶಿವಯೋಗಿ ಮತ್ತು ಶ್ರೀಮತಿ ರಾಣಿ ಮಂಜುಳಾ
✦ ಶಿವಾನಂದ ಮತ್ತು ಶ್ರೀಮತಿ ಸುಮ

ಮೊಮ್ಮಕ್ಕಳಾದ : ✦ ಡಾ.ನಮಿತ ✦ ಶ್ರೀಮತಿ ಚೈತ್ರ ಮತ್ತು ಕೇದಾರ್ ✦ ಶ್ರೀಮತಿ ಮೇಘು ಮತ್ತು ರಾಜೀವ್ ✦ ಶ್ರೀ ಮತಿ ಸಹನ ಮತ್ತು ವಿನಯ್ ✦ ಸಚಿನ್ ✦ ವಿಜಯಕೀರ್ತಿ ✦ ಚಂದನಾ ✦ ಗಣೇಶ್ ✦ ವಿಭೋದ್ ✦ ಯಶಸ್ವಿನಿ ✦ ಸಾಕ್ಷಿ ಎಸ್. ದಂಡಪ್ಪಳ ✦ ಸಮರ್ಥ ಎಸ್. ದಂಡಪ್ಪಳ ✦ ಯಶಸ್ ಎಸ್. ದಂಡಪ್ಪಳ ✦ ವಿಶೃತ್ ಎಸ್. ದಂಡಪ್ಪಳ

ಮರಿಮೊಮ್ಮಕ್ಕಳು : ಅಮೈರಾ, ವಿಹಾನ

ಹಾಗೂ ದಂಡಪ್ಪಳ ವಂಶಸ್ಥರು. ಮೊಬೈಲ್ : 94487-33367

## ತೃತೀಯ ಪುಣ್ಯಸ್ಮರಣೆ



**ದಿ|| ಶ್ರೀ ಎನ್. ಲಿಂಗರಾಜು**
AEE, PWD, Chitradurga
ಜನನ : 06.07.1959, ಮರಣ : 29.04.2018


ಸಂತಸ ನೀಡುವ ಬಂಧುವಾಗಿ, ಆಸರೆ ನೀಡುವ ಸ್ನೇಹಿತರಾಗಿ,
ಎಲ್ಲರ ಮನದೊಳಗೆ ಶಾಶ್ವತವಾಗಿ ನೆಲೆಸಿ,
ಮರೆಯಾದ ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳು ಸಂದರೂ,
ನೀವು ತೋರಿದ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ
ಸದಾ ನಿಮ್ಮ ಸ್ಮರಣೆಯಲ್ಲಿರುವ:
ಪತ್ನಿ : ಶ್ರೀಮತಿ ರಾಧಾ ಲಿಂಗರಾಜು.
ಪುತ್ರ : ಅವಿನಾಶ್. ಎಲ್.
ಪುತ್ರಿ : ಶ್ರೀಮತಿ ಶ್ವೇತಾ ಹರೀಶ್
ತಾಯಿ : ರುದ್ರಮ್ಮ ಹಾಗೂ ಕುಟುಂಬಸ್ಥರು.

|| ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ || || ಶ್ರೀ ವೆಂಕಟೇಶ್ವರ ಸ್ವಾಮಿ ಪ್ರಸನ್ನ || || ಶ್ರೀ ಮುರುಡ ಬಸವೇಶ್ವರ ಪ್ರಸನ್ನ ||





## ಶುಭ ವಿವಾಹ



ಶ್ರೀ ಶ್ರೀ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಬೃಹನ್ಮಠ, ನಂದಿಗುಡಿ.
ಇವರ ದಿವ್ಯ ಸಾನ್ನಿಧ್ಯದಲ್ಲಿ

ಆತ್ಮೀಯ ಬಂಧು-ಮಿತ್ರರೇ...

ನಮ್ಮ ಜೇಷ್ಠ ಪುತ್ರ
(ದಿ|| ಶ್ರೀಮತಿ ಕಮಲಮ್ಮ ದಿ|| ಶ್ರೀ ತಿಮ್ಮನಗೌಡ್ರು ಊರಮುಂದಲರ ಇವರ ಮೊಮ್ಮಗ)

**ಚಿ|| ರಾ|| ಹೆಚ್.ಪಿ. ಸಾಗರ್,** B.E. Marine

**ಚಿ||ಕುಂ||ಸೌ|| ಸಾಕ್ಷಿ,** B.A.

ಶ್ರೀಮತಿ ರತ್ನಮ್ಮ ಮತ್ತು ಶ್ರೀ ಮಂಜನಗೌಡ ಬಿ.ಜಿ. ಬಾಣದ
ಮುದಹದಡಿ, ದಾವಣಗೆರೆ, ತಾ. ಇವರ ಜೇಷ್ಠ ಪುತ್ರಿ

ಇವರ ವಿವಾಹ ಮಹೋತ್ಸವವನ್ನು ದಿನಾಂಕ 30.04.2021ನೇ ಶುಕ್ರವಾರ ಬೆಳಿಗ್ಗೆ 9.00 ರಿಂದ 9.35 ರವರೆಗೆ ಸಲ್ಲುವ 'ಮಿಥುನ' ಲಗ್ನದ ಶುಭ ಮುಹೂರ್ತದಲ್ಲಿ ನಂದಿಗುಡಿ ಗ್ರಾಮದಲ್ಲಿರುವ ಶ್ರೀ ನಂದೀಶ್ವರ ಸಮುದಾಯ ಭವನದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿದ್ದರು. ಆದರೆ ಮಹಾಮಾರಿ ಕೊರೊನಾ ಹರಡುವಿಕೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದ ಮಾರ್ಗಸೂಚಿಯಂತೆ **50 ಜನರ** ಸಮ್ಮುಖದಲ್ಲಿ ಮದುವೆಯನ್ನು ನೆರವೇರಿಸಬೇಕಾಗಿರುವುದರಿಂದ ಅತ್ಯಂತ ಸರಳವಾಗಿ ಹಮ್ಮಿಕೊಂಡಿರುತ್ತೇವೆ. ಬಂಧು-ಮಿತ್ರರು ತಾವು ಇದ್ದಲ್ಲಿಯೇ ವಧು-ವರರಿಗೆ ಶುಭ ಕೋರಬೇಕಾಗಿ ಈ ಮೂಲಕ ಕೋರುತ್ತೇವೆ.

**ಶ್ರೀಮತಿ ಶೈಲಜಾ ಮತ್ತು ಹೆಚ್.ಟಿ. ಪರಮೇಶ್ವರಪ್ಪ**
ಅಧ್ಯಕ್ಷರು, ಹರಿಹರ ತಾ. ಗ್ರಾ. ಜೆಡಿಎಸ್ ಘಟಕ,
ನಿರ್ದೇಶಕರು, ಶ್ರೀ ನಂದಿ ಸೌಹಾರ್ದ ಸಹಕಾರಿ ನಿಯಮಿತ, ಮಲೇಬೆನ್ನೂರು.
ಮತ್ತು ಊರಮುಂದಲರ ವಂಶಸ್ಥರು, ಹಳ್ಳಿಹಾಳ್.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte